ಪುಸ್ತಕಗಳಿಗಾಗಿ ಸಂಪರ್ಕಿಸಿರಿ
ಎಸ್. ಡ್ಯಾನಿಯೆಲ್ ಸಂಪತ್ ಕುಮಾರ್
ತಿರುನಿಲೈ ಕಾಲೋನಿ ನಂ. 147,
ವಿಚ್ಚೂರ್. ಪೋಸ್ಟ್
ಚನ್ನೈ . ಪಿನ್. 600103




*for books contact :*

**S.DANIEL SAMPATH KUMAR**

*No. 147, Thirunilai colony ,*
*vichoor post , chennai - 600 103*
*E-Mail : sdanielsampathkumar@gmail.com*
*Website : danielendtimebooksministry.org*
*Phone No : 99419 74213 , 96001 71260*



# *The Spoken Word*

# ಇಜಬೇಲಳೆಂಬ ಆ ಸ್ತ್ರೀ

**(THAT WOMAN JEZEBEL)**

## ಖಂಡಿಸುವಿಕೆ

**(THE REBUKE)**

*WILLIAM MARRION BRANHAM*

ದ್ರಾಕ್ಷೇಬಳ್ಳಿಯ ಕಣ್ಣೆದುರಿಗೆ ದೇವರ ಭಯವೇ ಇರಲಿಲ್ಲ. ಮತ್ತು ಅದು ಬಹಳ ಪ್ರಿಯವಾಗಿ ಅದರ ಪ್ರತಿಫಲವನ್ನು ತಿನ್ನುವದು. ಆತನ ಹೆಸರನ್ನು ಹೇಳಿಕೊಳ್ಳುವವರೆಲ್ಲರೂ, ಸಂತ ಜನರಿಗೆ ತಕ್ಕಂಥಾ ರೀತಿಯಲ್ಲಿ ಭಯದಿಂದ ಜೀವಿಸಲಿ. ನಾವು ಒಂದು ವೇಳೆ ಜನರನ್ನು ಮರುಳುಗೊಳಿಸಬಹುದು. ಆದರೆ ಕರ್ತನನ್ನು ಎಂದೂ ಮರುಳುಗೊಳಿಸಿ ಮೋಸಮಾಡಲಾರೆವು.

**''ಏಳು ಸಭೆಗಳ ಕಾಲ'' ಎಂಬ ಸಂದೇಶದಿಂದ, 227-239**

* * *

ಜನರು ನೋಡಿ ಕಂಡುಕೊಳ್ಳುತ್ತಿದ್ದರೆ! ''ಅವಳಿಂದ ಹೊರಬನ್ನಿರಿ, ಯಾಕಂದರೆ, ನೀವು ಏಕೆ ಆ ರೀತಿ ಸಾಯುವಿರಿ?''

## ಒಂದು ಕೊನೆಯ ಎಚ್ಚರಿಕೆ

42. **ಪ್ರಕಟಣೆ 2:23** ''ಅವಳ ಮಕ್ಕಳನ್ನು ಕೊಂದೇ ಕೊಲ್ಲುವೆನು; ಆಗ ನಾನು ಮನುಷ್ಯರ ಅಂತರಿಂದ್ರಿಯವನ್ನೂ ಹೃದಯವನ್ನು ಪರೀಕ್ಷಿಸುವವನಾಗಿದ್ದೇನೆಂಬುದು ಎಲ್ಲಾ ಸಭೆಗಳಿಗೆ ಗೊತ್ತಾಗುವದು. ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕಹಾಗೆ ಪ್ರತಿಫಲ ಕೊಡುವೆನು.''

43. ದೇವರು ಹೃದಯವನ್ನು ನೋಡುವಾತನಾಗಿದ್ದಾನೆ. ಅದು ಎಂದೂ ಬದಲಾಗಲಿಲ್ಲ, ಅದು ಎಂದೂ ಬದಲಾಗುವುದೂ ಇಲ್ಲ. ಇಲ್ಲಿ, ಎಲ್ಲಾ ಯುಗಗಳಲ್ಲಿ ಅಲ್ಲಿ ಎರಡು ಪಂಗಡಗಳಿವೆ; ಇಬ್ಬರೂ ದೇವರಿಂದ ಬಂದ ತಮ್ಮ ಪ್ರಕಟಣೆಯನ್ನು ಮತ್ತು ದೇವರೊಂದಿಗಿರುವ ತಮ್ಮ ಸಂಬಂಧವನ್ನು ಘೋಷಿಸುತ್ತಾರೆ. ''ಆದರೂ ದೇವರ ಸ್ಥಿರವಾದ ಅಸ್ತಿರವಾರವು ನಿಲ್ಲುತ್ತದೆ. ಅದರ ಮೇಲೆ - ತನ್ನವರು ಯಾರಾರೆಂಬುದನ್ನು ಕರ್ತನು ತಿಳಿದಿದ್ದಾನೆಂತಲೂ (ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟು ಬಿಡಬೇಕೆಂತಲೂ) ಲಿಪಿಯುಂಟು.'' **II ತಿಮೊಥೆಯನಿಗೆ 2:19** ''ಕರ್ತನು ಅಂತರಿಂದ್ರಿಯವನ್ನು ಹುಡುಕುವವನಾಗಿದ್ದಾನೆ.'' ''ಹುಡುಕು'' ಎಂಬ ಶಬ್ದಕ್ಕೆ 'ಹಿಂದೆ ಹೋಗು', 'ಕಂಡು ಹಿಡಿ' ಎಂಬ ಅರ್ಥವಿದೆ. ದೇವರು ನಮ್ಮ ಅಂತರಿಂದ್ರಿಯವನ್ನು (ಆಲೋಚನೆಯನ್ನು) ಕಂಡುಹಿಡಿಯುವವನಾಗಿದ್ದಾನೆ. ನಮ್ಮ ಹೃದಯದಲ್ಲಿ ಏನಿದೆಯೆಂಬುದನ್ನೂ ಆತನು ತಿಳಿದವನಾಗಿದ್ದಾನೆ. ನಮ್ಮ ಕಾರ್ಯಗಳನ್ನು ಆತನು ನೋಡುತ್ತಾನೆ. ನಮ್ಮ ಹೃದಯದೊಳಗಿಂದಲೇ ನೀತಿ ಅಥವಾ ದುಷ್ಟತನ ಹೊರಟು ಬರುತ್ತದೆ. ನಮ್ಮ ಗುರಿ ಮತ್ತು ನಮ್ಮ ಉದ್ದೇಶ - ಇವೆಲ್ಲವೂ ಆತನಿಗೆ ತಿಳಿದಿದೆ. ಯಾಕಂದರೆ ಆತನು ಪ್ರತಿಯೊಂದು ಕಾರ್ಯವನ್ನೂ ಕಾದುಕೊಂಡು ನೋಡುತ್ತಿದ್ದಾನೆ. ಮತ್ತು ನಮ್ಮ ಜೀವನದ ಲೆಕ್ಕವನ್ನು ನಾವು ಕೊಡುವ ಸಮಯದಲ್ಲಿ ಪ್ರತಿಯೊಂದು ಕಾರ್ಯ, ಪ್ರತಿಯೊಂದು ಮಾತು ಅದು ನ್ಯಾಯ ವಿಚಾರಣೆಗೆ ಒಳಗಾಗುವದು. ಆ ಸುಳ್ಳು

# ಇಜಬೇಲಳೆಂಬ ಆ ಸ್ತ್ರೀ
## (THAT WOMAN JEZEBEL)

## ಖಂಡಿಸುವಿಕೆ
## (THE REBUKE)

1. ಪ್ರಕಟನೆ 2:20, ''ಆದರೆ ನಿನ್ನ ಮೇಲೆ ಒಂದು ತಪ್ಪು ಹೊರಿಸಬೇಕಾಗುತ್ತದೆ; ಅದೇನೆಂದರೆ ಯೆಜೆಬೇಲೆಂಬ ಆ ಹೆಂಗಸು ತನ್ನನ್ನು ಪ್ರವಾದಿನಿಯೆಂದು ಹೇಳಿಕೊಂಡು ಜಾರತ್ವ ಮಾಡಬಹುದೆಂದೂ, ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನಬಹುದೆಂದೂ ನನ್ನ ದಾಸರಿಗೆ ಬೋಧಿಸುತ್ತಾ ಅವರನ್ನು ತಪ್ಪಾದ ಮಾರ್ಗದಲ್ಲಿ ಸೇರಿಸುತ್ತಿರುವಲ್ಲಿ ನೀನು ಅವಳನ್ನು ತಡೆಯದೆ ಬಿಟ್ಟಿರುವದೇ.''

2. ಇಂದಿನವರೆಗೂ ನಾನು ನಿಮಗೆ ಹೆಳುತ್ತಾ ಬರುತ್ತಿರುವ ಮಹಾ ಗುಡಾರ್ಥವನ್ನು ನಿರೂಪಿಸುವದರ ಸಲುವಾಗಿ ನೀವು 23 ನೇ ವಚನವನ್ನೂ ಸಹ ಓದಬೇಕೆಂದು ಬಯಸುತ್ತೇನೆ. ''ಅವಳ ಮಕ್ಕಳನ್ನು ಕೊಂದೇ ಕೊಲ್ಲುವೆನು. ಆಗ ನಾನು ಮನುಷ್ಯರ ಅಂತಿರಿಂದ್ರಿಯವನ್ನೂ ಹೃದಯವನ್ನೂ ಪರೀಕ್ಷಿಸುವವನಾಗಿದ್ದೇ ನೆಂಬಂದು ಎಲ್ಲಾ ಸಭೆಗಳಿಗೆ ಗೊತ್ತಾಗುವುದು.'' ವಾಸ್ತವಿಕವಾಗಿ ಎರಡು ರೀತಿಯ ಸಭೆಗಳುಂಟೆಂದೂ, ಆತ್ಮನು ಆ ಎರಡೂ ಸಭೆಗಳನ್ನೂ ಒಂದೇ

ಎಂದು ಭಾವಿಸಿ, ಅವುಗಳೊಡನೆ ಪ್ರತೀಯುಗದಲ್ಲಿ ಮಾತನಾಡುತ್ತಿರುವನೆಂದೂ ಅನೇಕ ಬಾರಿ ನಾನು ನಿಮಗೆ ಹೇಳಿದ್ದುಂಟು. ಮೇಲೆ ಹೇಳಿದ ವಚನದ ಆಧಾರದಿಂದ, **ಸಭೆಗಳು ಇರುವವೆಂದೂ,** ಕರ್ತನು ಅಂತರಿಂದ್ರಿಯವನ್ನೂ, ಹೃದಯವನ್ನೂ ಪರೀಕ್ಷಿಸುವವನಾಗಿದ್ದಾನೆಂಬುದನ್ನು ಕೆಲವು ಸಭೆಗಳು ಇನ್ನೂ ತಿಳಿಯಲಿಲ್ಲವೆಂದೂ ನಮಗೆ ಖಚಿತವಾಗುತ್ತದೆ. ಅತನು ಅಂತಹ ಒಂದು ಸ್ವಭಾವವನ್ನೇ ಹೊಂದಿರುವಾತನಾಗಿದ್ದಾನೆಂದು ಈಗ ಈ ಸಭೆಗಳಿಗೆ ನಿರೂಪಿಸಲಿಕ್ಕೆ ಸಿದ್ದ ನಾಗಿದ್ದಾನೆ. ಈಗ ಈ ಸತ್ಯವನ್ನು ತಿಳಿಯದಿರುವ ಆ ಸಭೆಗಳು ಅವು ಯಾವು ದಾಗಿವೆ? ನಿಜವಾಗಿ ಅದು ಸುಳ್ಳು ದ್ರಾಕ್ಷೆಬಳ್ಳಿಯಾಗಿದೆ. ಆದರೆ ನಿಜವಾದ ನಂಬಿಗಸ್ತರನ್ನೊಳಗೊಂಡ ಸಭೆಯೋ, ನ್ಯಾಯ ವಿಸ್ತರಣೆಯು ದೇವರ ಮಂದಿರ ದಿಂದಲೇ ಆರಂಭವಾಗುವದೆಂಬುದನ್ನರಿತು ದೇವರಿಗೆ ಭಯಪಟ್ಟು, ಮತ್ತೊಬ್ಬರು ತಮ್ಮನ್ನು ನ್ಯಾಯ ತೀರಿಸದೇ ಇರುವಹಾಗೆ ತಮ್ಮನ್ನು ತಾವೇ ಸರಿಪಡಿಸಿ ಕೂಳ್ಳುತ್ತಾರೆ.

3. ಸುಳ್ಳು ಸಭೆಗಳಾಗಿದ್ದಾಗ್ಯೂ ದೇವರು ಅವುಗಳನ್ನು ತನ್ನ ಸಭೆಯನ್ನಾಗಿಯೇ ಪರಿಗಣಿಸುತ್ತಾನೇಕೆ? ಸತ್ಯ ಸಂಗತಿ ಏನೆಂದರೆ ಅವರು ಕ್ರೈಸ್ತರಾಗಿದ್ದಾರೆ. ಆದರೆ ಅವರು ಶಾರೀರಿಕವಾಗಿ ಮಾತ್ರವೇ ಕ್ರೈಸ್ತರಾಗಿದ್ದಾರೆ. ಅದರೆ ಆತ್ಮ ಸಂಬಂಧವಾಗಿ ಅವರನ್ನು ಕ್ರೈಸ್ತರೆಂದು ಕರೆಯಲು ಸಾಧ್ಯವಾಗಲಾರದು. ಅವರು ಕ್ರಿಸ್ತನ ಹೆಸರನ್ನು ವ್ಯರ್ಥವಾಗಿಯೇ ಭರಿಸಿಕೊಂಡಿರುತ್ತಾರೆ. ''ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದೂ ವ್ಯರ್ಥ ಎಂಬುದೇ.'' (ಮಾರ್ಕ 7:7) ಆದರೆ ನಿಜವಾಗಿ ಅವರು ಕ್ರೈಸ್ತರು, ಅಲ್ಲದೆ ಬೇರೆ ಏನಾಗಿರಲು ಸಾಧ್ಯ? ಒಬ್ಬ ಮಹಮ್ಮದೀಯ, ಮಹಮ್ಮದೀಯನೇ ಆಗಿದ್ದಾನೆ. ಅವನು ಯಾವ ರಿತಿ ಜೀವಿಸಿದರೂ ಅದು ಗಣನೆಗೆ ಬರುವದಿಲ್ಲ. ಅದು ಅವನ ಧರ್ಮವಾಗಿದೆ. ಯಾಕೆಂದರೆ ಕುರಾನ್ ಭೋಧಿಸುವದನ್ನು ಅವನ ತತ್ವದಲ್ಲಿ (ನಂಬುವವನ) ಅಂಗೀಕರಿಸುವವನು ಆಗಿದ್ದಾನೆ. ಅದೇ ರೀತಿಯಲ್ಲಿ ಒಬ್ಬನು ಯೇಸುಕ್ರಿಸ್ತನು ಒಬ್ಬ ದೇವರ ಮಗನು ಒಬ್ಬ ಕುವರಿಯಿಂದ ಹುಟ್ಟಿದಾತನು ಕ್ರೂಜಿಸಲ್ಪಟ್ಟು ಸತ್ತು, ಸತ್ತವರೊಳಗಿಂದ ಎದ್ದು ಬಂದನು ಮತ್ತು ಆತನು ಲೋಕದ ರಕ್ಷಕನು ಎಂಬ ಇನ್ನಿತರ ಸಂಗತಿಗಳಾದ ಸತ್ಯಾರ್ಥವನ್ನು



ಆದರೆ ದೇವರ ಹೆಸರು ದೂಷಣೆಗೆ ಒಳಪಡುವಂತೆ, ಇದೆಲ್ಲವನ್ನೂ ಕರ್ತನ ಹೆಸರಿನಲ್ಲೇ ಮಾಡುವನು, ಅದು ರಷ್ಯಾದಲ್ಲಿರುವಂತೆ ಅಲ್ಲಿ ಕೆಥೋಲಿಕ್ ಧರ್ಮ ಮಾಡಿದ ಸಂಗತಿಗಳ ಕಾರಣದಿಂದಾಗಿ.

39. 8ನೇ ವಚನ ''ಮತ್ತು ಭೂನಿವಾಸಿಗಳೆಲ್ಲಾ (ಅಂದರೆ ಲೋಕಾದಿಯಿಂದಲೇ ವಧಿಸಲ್ಪಟ್ಟ ಯಜ್ಞಕುರಿಯಾದಾತನ ಜೀವನದ ಪುಸ್ತಕದಲ್ಲಿ ಯಾರ್‍ಯಾರ ಹೆಸರುಗಳು ಬರೆಯಲ್ಪಟ್ಟಿರುವುದಿಲ್ಲವೋ ಅವರು) ಅದಕ್ಕೆ ನಮಸ್ಕಾರ ಮಾಡುವರು.''

40. ಕುರಿಯು ಅವನಿಗೆ ಅಡ್ಡ ಬೀಳದು, ದೇವರಿಗೆ ಸ್ತೋತ್ರವಾಗಲಿ, ಆರಿಸಿಕೊಳ್ಳಲ್ಪಟ್ಟವರು ಹೊರತು ಬೇರೆ ಎಲ್ಲರೂ ಮೋಸಗೊಳಿಸಲ್ಪಡುವರು. ಆದರೆ ಅವರು (ಆರಿಸಿಕೊಳ್ಳಲ್ಪಟ್ಟವರು) ಮೋಸಗೊಳಿಸಲ್ಪಡುವುದಿಲ್ಲ. ಯಾಕೆಂದರೆ ಅವರು ಕುರುಬನ ಸ್ವರವನ್ನು ಕೇಳಿ ಅವನ ಹಿಂದೆ ಹೋಗುವರು.

41. ಈಗ ನಾವು ನಿಮಗೆ ಏನನ್ನು ತೋರಿಸಲು ಪ್ರಯತ್ನ ಮಾಡುತ್ತಿದ್ದೇವೆಯೋ ಅದನ್ನು ಈಗ ನೋಡಿರಿ. ಈ ಮೊದಲನೇ ಯುಗದಲ್ಲಿ ಪ್ರಾರಂಭವಾದ ಮೃತ್ಯುವಿನ ಬೀಜವು - ಈ ಸಂಸ್ಥೆಯೆಂಬ ಬೀಜವು, ಕೊನೆಗೂ ಅದು ದೊಡ್ಡರಾಗಿ ಮರವಾಗಿ ಬೆಳೆಯಿತು, ಮತ್ತು ಅದು ಎಲ್ಲಾ ಅಶುದ್ಧ, ಪಕ್ಷಿಗಳಿಗೂ ಆಶ್ರಯ ಸ್ಥಾನವಾಯಿತು. ಅವಳು ತಾನು ಜೀವನವನ್ನು ಕೊಡುವವಳೆಂದು ಎಷ್ಟಾಗಿ ಹಕ್ಕು ಸಾಧಿಸಿದರೂ, ಅವಳು ಮರಣವನ್ನು ಉಂಟುಮಾಡುವವಳಾಗಿದ್ದಾಳೆ. ಅವಳ ಫಲವು ಮರಣವಾಗಿದೆ. ಅವಳೊಂದಿಗೆ ಪಾಲು ತಕ್ಕೊಳ್ಳುವವರು ಸತ್ತವರಾಗಿದ್ದಾರೆ. ಆ ಮಹಾ ಬಲಶಾಲಿಯಾದ ಸರ್ವ ಲೋಕದ ಸಭೆ ಎಂಬ ಜನರನ್ನು ಮರಳುಗೊಳಿಸುವ ಸಂಸ್ಥೆಯು, ಅವಳಲ್ಲಿ ದೈಹಿತ ಮತ್ತು ಆತ್ಮೀಕ ರಕ್ಷಣೆಯು ಉಂಟೆಂದು ಹೇಳಿ ಜನ ಸಮೂಹವನ್ನು ಮರುಳುಗೊಳಿಸಿ ನಾಶಮಾಡುತ್ತದೆ. ಆದರೆ ಅವಳು ಮರಣವೇ ದೇಹ ದಾರಿಯಾಗಿ ಬಂದವಳು ಮಾತ್ರವೇ ಅಲ್ಲ, ಆದರೆ ಸತ್ತ ಹೆಣದಂಥ ಪ್ರಾಣಿಯು, ಅದು ತಾನಾಗಿ ಮರಣದಿಂದ ಮರಣಕ್ಕೆ ಒಪ್ಪಿಸಲ್ಪಡುವಳು, ಅದುವೇ ಬೆಂಕಿಯ ತೆರೆಯಾಗಿದೆ. ಓ, ಅವಳಲ್ಲಿ ಉಳಿದುಕೊಂಡರೆ ತಮ್ಮ ಅಂತ್ಯವೇನಾಗುವದೆಂದು

35. ಕಬ್ಬಿಣ ಮತ್ತು ಆವೆ ಮಣ್ಣಿನ ವಿಷಯ ನಿಮಗೆ ಒಂದು ಸಂಗತಿಯನ್ನು ನಾನು ಹೇಳುವೆನು. ಅಲ್ಲಿ ಸಂಯುಕ್ತ ರಾಷ್ಟ್ರದ ಅಧಿವೇಶನದಲ್ಲಿ (U.N.) ಆ ಮೇಜಿನ ಮೇಲೆ ಕ್ರುಶ್ಚೇವನು (ರಷ್ಯದ ಮಾಜಿ ರಾಷ್ಟ್ರಪತಿ) ತನ್ನ ಪಾದ ರಕ್ಷೆಯನ್ನು ತೆಗೆದು ಹೊಡೆದದ್ದು ನೆನಪಿದೆಯೋ? ಸರಿ, ಅಲ್ಲಿ ಐದು ಪೂರ್ವದ ದೇಶಗಳು ಮತ್ತು ಐದು ಪಶ್ಚಿಮ ದೇಶಗಳು ಇದ್ದವು. ಕ್ರುಶ್ಚೇವನು ಪೂರ್ವ ದೇಶಗಳ ಪರವಾಗಿ ಮಾತಾಡಿದನು, ಮತ್ತು ರಾಷ್ಟ್ರಪತಿ ಐಸೆನ್‌ಹೋವರ್ ಪಶ್ಚಿಮ ದೇಶಗಳ ವಿಷಯ ಮಾತಾಡಿದನು. ರಷ್ಯದ ಭಾಷೆಯಲ್ಲಿ ಕ್ರುಶ್ಚೇವ್ ಎಂದರೆ ಆವೆ ಮಣ್ಣು, ಮತ್ತು ಐಸನ್ ಹೋವರ್ ಎಂದರೆ ಕಬ್ಬಿಣ. ಇವರಿಬ್ಬರೂ ಲೋಕದ ಮುಖ್ಯ ಮುಖಂಡರಾಗಿದ್ದಾರೆ, ಕಬ್ಬಿಣ ಮತ್ತು ಆವೆ ಮಣ್ಣಿನ ಪಾದದ ಎರಡು ದೊಡ್ಡ ಹೆಬ್ಬೆರಳುಗಳು, ಅಲ್ಲಿ ಒಬ್ಬರಿಗೊಬ್ಬರು ಹತ್ತಿರವಾಗಿ ಇದ್ದರು. ನಾವು ಇದೆಲ್ಲದರ ಕಡೇಯಲ್ಲಿ ಇದ್ದೇವೆ.

36. 4 ನೇ ವಚನದಲ್ಲಿ ಅದು ಈ ರೀತಿಯಾಗಿ ಪ್ರಶ್ನೆ ಕೇಳುತ್ತದೆ, ''ಈ ಮೃಗದೊಂದಿಗೆ ಯುದ್ಧಮಾಡಲು ಯಾರು ಶಕ್ತರು?'' ಈಗ ಈ ಕಾಲದಲ್ಲಿ ಲೋಕದಲ್ಲಿ ಕೆಲವು ಪ್ರಸಿದ್ಧ ಹೆಸರುಗಳಿವೆ. ಅಲ್ಲಿ ಕೆಲವು ಬಹಳ ಬಲಶಾಲಿಗಳಾದ ದೇಶಗಳಿವೆ. ಆದರೆ ಈಗ ರೋಮ್ ರಾಜ್ಯವು ಎಲ್ಲದರಲ್ಲಿಯೂ ಮುಖ್ಯವಾಗಿದೆ. ಪೋಪ (ಪಾಪ ಸಾಹೇಬನು) ಚಾಲಕನ ಆಸನದಲ್ಲಿದ್ದಾನೆ. ಮತ್ತು ಅವನ ಸಾಮರ್ಥ್ಯವು ಇನ್ನು ಹೆಚ್ಚಾಗುವದು. ಅವನ ವಿರುದ್ಧ ಯಾರೂ ಯುದ್ಧಮಾಡಲು ಸಾಧ್ಯವಿಲ್ಲ.

37. ಅನು ವಚನ, ''ಮತ್ತು ಅದು ಬಾಯಿ ತೆರೆದು ದೇವರನ್ನು ದೂಷಿಸಿದ್ದಲ್ಲದೆ . . .'' (ಸಿದ್ಧಾಂತಕ್ಕೋಸ್ಕರ ಮನುಷ್ಯರ ಕಟ್ಟಳೆಗಳನ್ನು ಬೊಧಿಸುವವರು, ದುಡಿಕಿನವರು, ಹೆಮ್ಮೆಯುಳ್ಳವರು, ಭೋಗಗಳನ್ನು ಪ್ರೀತಿಸುವವರು, ಭಕ್ತಿಯ ವೇಷವಿದು ಅದರ ಬಲವನ್ನು ಬೇಡವೆನ್ನುವವರು) ಅವನು ದೇವರ ನಾಮವನ್ನು ದೂಷಿಸಿದನು - ಆ ಹೆಸರನ್ನು ಪದವಿಗೆ ಬದಲಾಯಿಸುವವರು ಮತ್ತು ಆ ಸತ್ಯವನ್ನು ಪಾಲಿಸಲು ನಿರಾಕರಿಸುವವರು.

38. 7 ನೇ ವಚನ ''ಮತ್ತು ದೇವಜನರೊಂದಿಗೆ ಯುದ್ಧಮಾಡುವದಕ್ಕೆ ಅನುಮತಿ ಪಡೆದುಕೊಂಡನು'' ಹಿಂಸೆ - ನಿಜವಾದ ವಿಶ್ವಾಸಿಗೆ ಮರಣದಂಡನೆ,



ಅಂಗೀಕರಿಸುವವನಾಗಿರುವ ಕ್ರೈಸ್ತನು ಕ್ರೈಸ್ತನೇ ಆಗಿದ್ದಾನೆ. (ನಿಜವಾಗಿ) ಲವೋದಿಕೆಯ ಕಾಲದಲ್ಲಿ ಅಲ್ಲಿ ಕ್ರೈಸ್ತ ರೆನಿಸಿಕೊಳ್ಳುವ ಅನೇಕರೂ ಇರುವರು. ಯಾಕಂದರೆ ಅವರು ಯೇಸುವಿನ ಉತ್ತಮವಾದ ಗುಣಾತಿಶಯಗಳನ್ನು ಒಪ್ಪುವವರೂ ಆದರೆ ಆತನ ದೈವತ್ವವನ್ನು ನಿರಾಕರಿಸುವ ಹಕ್ಕನ್ನು ಹೊಂದಿಕೊಂಡಿರುವವರೂ ಆಗಿರುತ್ತಾರೆ. ಕ್ರೈಸ್ತ ವಿಜ್ಞಾನಿಗಳು (Christian Scientist) ಈಗಾಗಲೇ ಅದನ್ನು ಮಾಡಿರುತ್ತಾರೆ, ಮಾತ್ರವಲ್ಲದೆ ಸಾಮಾಜಿಕ ಸುವಾರ್ತೆಯನ್ನು ಭೋಧಿಸುವ ಅನೇಕರು ಇದೇರೀತಿಯಾಗಿರುತ್ತಾರೆ) ಅವನ್ನು ಒಬ್ಬ ನಾಮಧೇಯ ಕ್ರೈಸ್ತನಾಗಿದ್ದಾನೆ ಮತ್ತು ಒಂದು ಸಭೆಗೆ (ಸಂಪ್ರದಾಯ ಸಭೆ) ಸಂಬಂಧಪಟ್ಟವನಾಗಿದ್ದಾನೆ. ಆದರೆ ಅವನೊಬ್ಬ ನಿಜವಾದ ಅಥವ ಆತ್ಮೀಕ ವಿಶ್ವಾಸಿಯಾಗಿರುವುದಿಲ್ಲ. ಈ ತರದ ವಿಶ್ವಾಸಿ ಯಾರೆಂದರೆ, ಅವನು ಕ್ರಿಸ್ತನ ದೇಹದೊಳಗೆ ದೀಕ್ಷಾಸ್ನಾನ ಮಾಡಿಸಲ್ಪಟ್ಟು, ಮತ್ತು ಆತನ (ಕ್ರಿಸ್ತನ) ಒಂದು ಅಂಗವಾಗಿರುವಾತನೇ ಆಗಿದ್ದಾನೆ. ಆದರೆ ಹೇಗಿದ್ದರೂ ಅದು ದೇವರ ನಿಯಮದ ಪ್ರಕಾರ, ಗೋಧಿಯೊಂದಿಗೆ ಆ ಕಳೆಗಳು ಬೆಳೆಯುತ್ತವೆ, ಮತ್ತು ಅವುಗಳು (ಕಡೇ ದಿನಗಳವರೆಗೆ) ಕೀಳಲ್ಪಡಬಾರದು. ಅದು ದೇವರ ಅಪ್ಪಣೆಯಾಗಿರುತ್ತದೆ. ಅವರು ಕಟ್ಟಲ್ಪಟ್ಟು, ಸುಟ್ಟುಬಿಡಬೇಕಾದ ಸಮಯವು ಬರುತ್ತಲಿದೆ. ಆದರೆ ಇನ್ನೂ ಬಂದಿಲ್ಲ.

4. ಆದುದರಿಂದ ಆತ್ಮವು ಈ ಮಿತ್ರ ಗುಂಪಿನೊಂದಿಗೆ ಮಾತಾಡುತ್ತದೆ. ಒಂದು ಕಡೆಯಲ್ಲಿ ಆತನು ಹೊಗಳುತ್ತಿದ್ದಾನೆ. ಇನ್ನೊಂದು ಕಡೆಯಲ್ಲಿ ಆತನು ಖಂಡಿಸುತ್ತಿದ್ದಾನೆ. ಸತ್ಯವು ಏನಾಗಿದೆಯೆಂದು ಆತನು ನಿಜವಾದ ವಿಶ್ವಾಸಿಗೆ ಹೇಳಿದ್ದಾನೆ. ಈಗ ಆ ಸುಳ್ಳಿನ ದ್ರಾಕ್ಷೆಬಳ್ಳಿಯು (ಸುಳ್ಳು ವಿಶ್ವಾಸಿ) ಕರ್ತನ ಮುಂದೆ, ಧರ್ಮಿಗಳಾಗಿ ನಿರ್ಣಯ ಹೊಂದಬೇಕಾದರೆ ಏನು ಮಾಡಬೇಕು ಎಂಬುದಾಗಿ ಆತನು ಎಚ್ಚರಿಸುವವನಾಗಿದ್ದಾನೆ.

## ಇಜಬೇಲಳೆಂಬ ಆ ಸ್ತ್ರೀ

5. ಪಾಪವು ಯಾವ ದಾರಿಯನ್ನು ತೆಗೆದುಕೊಳ್ಳುತ್ತದೆ ಎಂದು ನಮಗೆ ಅಪೋಸ್ತಲನಾದ ಯಾಕೋಬನು ತೋರಿಸಿದ್ದಾನೆ. ಯಾಕೋಬನು 1:14-15.

''ಆದರೆ ಪ್ರತಿಯೊಬ್ಬನು ತನ್ನಲ್ಲಿ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡುವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ. ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ'' ಈಗ ಇದು ಸಭೆಯ (ಕ್ರೈಸ್ತತ್ವದ) ಯುಗಗಳಲ್ಲಿ ನಡೆಯುತ್ತಲಿರುವ ನಿಜವಾದ ಚಿತ್ರವಾಗಿದೆ. ಪಾಪವು ಒಂದು ಕೇವಲ ಭಾವನೆಯಲ್ಲಿ ಪ್ರಾರಂಭವಾದಂತೆ, ಮರಣವೂ ಕೂಡ ಸಭೆಗೆ ಒಂದು ಸರಳವಾದ, ನಿಕೊಲಾಯಿತರ, ಸಾಧಾರಣವಾಗಿ ಗಣನೆಗೆ ಬಾರದ ಕೃತ್ಯಗಳಿಂದ ಪ್ರಾರಂಭವಾಯಿತು. ಆ ಕೃತ್ಯಗಳಿಂದ ಅದು ಒಂದು ಸಿದ್ಧಾಂತದ ಕಡೆಗೆ ಹೋಯಿತು. ಸಿದ್ಧಾಂತದಿಂದ, ಅದು ಆ ರಾಜ್ಯದ (ರಾಜಕೀಯ) ಶಕ್ತಿಯನ್ನು ತಬ್ಬಿಕೊಂಡಿತು ಮತ್ತು ಈ ರೀತಿಯಾಗಿ ಆ ವಿಗ್ರಹಾರಾಧನೆ ಅಲ್ಲಿ ಪ್ರಾರಂಭವಾಯಿತು. ಈಗ ಈ ಸಮಯದಲ್ಲಿ ಅದು ತನ್ನದೇ ಆದ ಆ ಪ್ರವಾದಿನಿಯ ಕಡೆಗೆ (ಬೋಧಕಿ) ಹೋಗುತ್ತದೆ ಮತ್ತು ಹೀಗೆ ಅದು ಮುಂದುವರಿದು, ತನ್ನನ್ನು ತಾನು ಆ ಬೆಂಕಿಯ ಕೊಂಡದಲ್ಲಿ (ನರಕ) ಕಂಡುಕೊಳ್ಳುವವರೆಗೆ ಮುಂದುವರೆಯುವುದು ಯಾಕಂದರೆ ಅದು ಸರಿಯಾಗಿ ಅಲ್ಲಿಯೇ ಆ ಎರಡನೇ ಮರಣದಲ್ಲಿ ಕೊನೆಗೊಳ್ಳುತ್ತದೆ.

6. ಈಗ ಈ ನಾಲ್ಕನೇ ಯುಗದ ವಿರುದ್ಧವಾಗಿ ದೇವರ ಸಂಪೂರ್ಣವಾದ ಘರ್ಜನೆ, ಈ ಪ್ರವಾದಿನಿಯಾದ ಇಜೆಬೇಲಳ ನಿಂದನೆಯಲ್ಲಿ ಕಂಡುಬರುತ್ತದೆ. ಮತ್ತು ನಿಜವಾಗಿ ಆತನು ಅವಳನ್ನು (ಇಜೆಬೇಲಳು) ಆ ರೀತಿಯಾಗಿ ಯಾಕೆ ನಿಂದನೆ ಮಾಡುತ್ತಾನೆಂದು ಕಂಡುಕೊಳ್ಳಲು, ನಾವು ಅವಳ ಚರಿತ್ರೆಯನ್ನು ಸತ್ಯ ವೇದದಲ್ಲಿ ನೋಡಬೇಕಾಗುತ್ತದೆ, ಮತ್ತು ನಾವು ಅವಳು ಹಿಂದೆ ಅಲ್ಲಿ ಏನು ಮಾಡಿದ್ದಾಳೆಂದು ನಾವು ಕಂಡುಕೊಳ್ಳುವಾಗ ಈ ದಿನದಲ್ಲಿ (ಸಹ) ಏನು ನಡೆಯುತ್ತದೆ ಎಂದು ನಾವು ಕಂಡುಕೊಳ್ಳುವೆವು.

7. ನಾವು ಇಜೆಬೇಲಳ ವಿಷಯವಾಗಿ ತಿಳಿದುಕೊಳ್ಳುವ ಮೊತ್ತ ಮೊದಲನೆಯ ಮತ್ತು ಬಹಳ ಪ್ರಾಮುಖ್ಯವಾದ ಸಂಗತಿ ಏನೆಂದರೆ ಅವಳು ಒಬ್ಬ ಅಬ್ರಹಾಮನ ಮಗಳು ಅಲ್ಲವಾಗಿರುವುದೇ ಅಥವಾ ಅವಳು ಇಸ್ರಾಯೇಲ್ ಗೋತ್ರಕ್ಕೆ ಸೇರಿಸಲ್ಪಟ್ಟದ್ದರಲ್ಲಿ ಮೋವಾಬ್ಯಳಾದ ರೂತಳಂತೆ ಯಾವ ಒಂದು



ನೋಡುತ್ತೀರೋ? ಎಲ್ಲರನ್ನೂ ಜಜ್ಜಿಕೊಂಡು ರಾಜ್ಯವಾಳಿದ ಮತ್ತು ಇದರ ಮೂಲಕವಾಗಿ, ಎಂದೂ ಯಾರೂ ತಿಳಿಯದಷ್ಟು ಬಲಶಾಲಿಯಾದ ರಾಜ್ಯವಾದ, ಆ ರಾಜತ್ವವು (ರೋಮ್) ಕೊನೆಗೆ ಮರಣವಾದ ಗಾಯವನ್ನು ಹೊಂದಿತು. ಸೈನ್ಯದಿಂದ ಇತರರನ್ನೂ ಹತೋಟಿಯಲ್ಲಿಡುವಂತಾ ಅವಳ ಶಕ್ತಿಯು ಹೊರಟು ಹೋಗಿತ್ತು. ಆದರೆ ಕೊನ್‌ಸ್ಟೆಂಡಾಯಿನನ ಸಮಯದಲ್ಲಿ ಅವಳು ಪುನಃ ಪುನರುಜ್ಜೀವಿಸಿದಳು. ಯಾಕಂದರೆ ಪೋಪನ (ಪಾಪ ಸಾಹೇಬನ) ರೋಮ್ ಎಲ್ಲಾ ಲೋಕದಲ್ಲೂ ಹರಡಿಕೊಂಡಿದೆ, ಮತ್ತು ಅವಳ ಶಕ್ತಿಯು ಪೂರ್ಣವಾಗಿದೆ. ಅವಳ ರಾಜರನ್ನು ವ್ಯಾಪಾರಿಗಳನ್ನು, ಉಪಯೋಗಿಸುತ್ತಾಳೆ, ಮತ್ತು ಅವಳ ಮರಣಕರವಾದ ಧಾರ್ಮಿಕ ಮತ್ತು ಆರ್ಥಿಕ ಶಕ್ತಿಯಿಂದ, ಈ ಕಾಲದ ಒಂದು ದೇವಿಯೋ ಎಂಬಂತೆ ಅವಳು ರಾಜ್ಯವಾಳುತ್ತಿದ್ದಾಳೆ. ಅವಳು ಆ ಗಂಡು ಮಗುವನ್ನು (ಪ್ರಕ - 12 ನೇ ಅಧ್ಯಾಯ) ನುಂಗಲು ಕಾದುಕೊಂಡು ನಿಂತಿದ್ದ ಆ ಘಟಸರ್ಪವೂ ಅವಳೇ ಆಗಿದ್ದಾಳೆ. ಹೆರೋದನು ಕರ್ತನಾದ ಯೇಸುವನ್ನು ಕೊಲ್ಲಲು ಪ್ರಯತ್ನ ಮಾಡಿದನು. ಆದರೆ ವಿಫಲನಾದನು. ಆಮೇಲೆ ಯೇಸುವು ರೋಮಾಯ ಸರದಾರರ ಕೈಯಲ್ಲಿ ಕ್ರೂಜೆಗೆ ಹಾಕಲ್ಪಟ್ಟನು. ಆದರೆ ಈಗ ಆ ಸಿಂಹಾಸನಕ್ಕೆ ಏರಿಸಲ್ಪಟ್ಟನು.

34. ಈಗ ನಾನು ಈಗಾಗಲೇ ಹೇಳಿದ ಸಂಗತಿಯೊಂದಿಗೆ, ದಾನಿಯೇಲನ ದರ್ಶನವನ್ನು ನೆನಪು ಮಾಡಿಕೊಳ್ಳಿರಿ. ಆ ಪ್ರತಿಮೆಯ ಕಡೇ ಭಾಗ, ಕಡೇಯದಾದ ಸರ್ವಲೋಕದ ಶಕ್ತಿಯೂ, ಆ ಪಾದಗಳಲ್ಲಿತ್ತು. ಅದು ಕಬ್ಬಿಣ ಮತ್ತು ಆವೆ ಮಣ್ಣಿನ ಮಿಶ್ರಣವಾಗಿತ್ತು. ಆ ಕಬ್ಬಿಣವೆಂದರೆ ಅದು ರೋಮನ್ ರಾಜ್ಯವೇ. ಆದರೆ ಈಗ ಅದು ಇನ್ನೆಂದೂ ಪೂರ್ಣ ಕಬ್ಬಿಣವಾಗಿರುವದಿಲ್ಲ. ಅದರೊಂದಿಗೆ ಆವೆ ಮಣ್ಣು ಮಿಶ್ರ ಮಾಡಲ್ಪಟ್ಟಿರುತ್ತದೆ. ಆದರೂ ಅದು ಅಲ್ಲಿದೆ. ಮತ್ತು ಎಲ್ಲಾ ಲೋಕದ ವಿಚಾರಗಳನ್ನು ಇನ್ನು ನಡೆಸುತ್ತದೆ. ಅಂದರೆ ಪ್ರಜಾ ಪ್ರಭುತ್ವ ಹೊಂದಿದ ದೇಶಗಳಲ್ಲಿ ಅಲ್ಲದೆ ಕ್ರೂರ ರಾಜರನ್ನು ಹೊಂದಿದ ದೇಶಗಳಲ್ಲಿ ಸಹ, ಎಲ್ಲಾ ರಾಜ್ಯಗಳಲ್ಲಿಯೂ ಈ ರೋಮನ್ ಸಭೆ ಇದೆ. ಅದು ಅದೆಲ್ಲದರಲ್ಲೂ ಮಿಶ್ರಮಾಡಲ್ಪಟ್ಟಿದೆ.

ಸಿಂಹದ ಬಾಯಿಯಂತೆಯೂ ಇದ್ದವು; ಅದಕ್ಕೆ ಘಟಸರ್ಪನು ಶಕ್ತಿಯನ್ನೂ, ಸಿಂಹಾಸನವನ್ನೂ ಮಹಾ ಅಧಿಕಾರವನ್ನೂ ಕೊಟ್ಟನು. ಅದರ ತಲೆಗಳಲ್ಲಿ ಒಂದು ತಲೆ ಗಾಯ ಹೊಂದಿ ಸಾಯುವ ಹಾಗಿರುವದನ್ನು ಕಂಡೆನು. ಆ ಮರಣಕರವಾದ ಗಾಯವು ವಾಸಿಯಾಯಿತು; ಭೂಲೋಕದವರೆಲ್ಲರೂ ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು; ಘಟಸರ್ಪನು ಆ ಮೃಗಕ್ಕೆ ಅಧಿಕಾರವನ್ನು ಕೊಟ್ಟವನಾದ್ದರಿಂದ ಅವರು ಆ ಘಟಸರ್ಪನಿಗೆ ನಮಸ್ಕಾರ ಮಾಡುವವರಾದರು. ಇದಲ್ಲದೆ ಆ ಮೃಗಕ್ಕೂ ನಮಸ್ಕಾರ ಮಾಡಿ - ಈ ಮೃಗಕ್ಕೆ ಸಮಾನರು ಯಾರು? ಇದರ ಮೇಲೆ ಯುದ್ಧ ಮಾಡುವದಕ್ಕೆ ಯಾರು ಶಕ್ತರು? ಅಂದರು; ಪ್ರಕಟಣೆ 12:1-5 "ಪರಲೋಕದಲ್ಲಿ ಒಂದು ಮಹಾ ಲಕ್ಷಣವು ಕಾಣಿಸಿತು. ಅದೇನೆಂದರೆ, ಸೂರ್ಯನನ್ನು ಧರಿಸಿಕೊಂಡಿದ್ದ ಒಬ್ಬ ಸ್ತ್ರೀಯಿದ್ದಳು; ಆಕೆಯ ಕಾಲುಗಳ ಕೆಳಗೆ ಚಂದ್ರನಿದ್ದನು. ಆಕೆಯ ತಲೆಯಮೇಲೆ ಹನ್ನೆರಡು ನಕ್ಷತ್ರಗಳುಳ್ಳ ಒಂದು ಕಿರೀಟ ವಿತ್ತು; ಆಕೆಯು ಗರ್ಭಿಣಿಯಾಗಿದ್ದು ಪ್ರಸವ ವೇದನೆಯಿಂದ ಸಂಕಟಪಡುತ್ತಾ ಕೂಗುತ್ತಿದ್ದಳು. ಪರಲೋಕದಲ್ಲಿ ಮತ್ತೊಂದು ಲಕ್ಷಣವು ಕಾಣಿಸಿತು. ಅದೇನೆಂದರೆ ಕೆಂಪಾದ ಮಹಾ ಘಟಸರ್ಪವಿತ್ತು; ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಇದ್ದವು; ಅದರ ತಲೆಗಳಮೇಲೆ ಏಳು ಮುಕುಟಗಳಿದ್ದವು. ಅದರ ಬಾಲವು ಆಕಾಶದಲ್ಲಿರುವ ನಕ್ಷತ್ರಗಳೊಳಗೆ ಮೂರರಲ್ಲೊಂದು ಭಾಗವನ್ನು ಎಳೆದು ಭೂಮಿಗೆ ಹಾಕಿತು. ಹೆದರುತ್ತಿದ್ದ ಆ ಸ್ತ್ರೀಯು ಹೆತ್ತಕೂಡಲೇ ಆಕೆಯ ಮಗುವನ್ನು ನುಂಗಿಬಿಡಬೇಕೆಂದು ಆ ಘಟಸರ್ಪವು ಅಲ್ಲೇ ಕಾದುಕೊಂಡಿತ್ತು. ಆಕೆ ಜನಾಂಗ ಗಳನ್ನು ಕಬ್ಬಿಣದ ಕೋಲಿನಿಂದ ಆಳಬೇಕಾದ ಒಂದು ಗಂಡು ಮಗುವನ್ನು ಹೆತ್ತಳು. ಆ ಕೂಸು ಫಕ್ಕನೇ ದೇವರ ಬಳಿಗೂ, ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು." ಈ ಎರಡೂ ಮೃಗಗಳಲ್ಲಿ ಸೈತಾನನು ಮತ್ತು ಅವನ ಪೈಶಾಚಿಕ ಧರ್ಮವು ತುಂಬಿಕೊಂಡಿರುತ್ತದೆ. ಪ್ರಕಟಣೆ 14 ರಲ್ಲಿ ಆ ಮರಣಕರವಾಗಿ ಗಾಯಗೊಂಡು ಪುನಃ ಜೀವಿಸಿದ ಮೃಗವು, ಆ ಕ್ರೂರರ ಆಕ್ರಮಣಕ್ಕೆ ಒಳಗಾಗಿ ಅವಳ ತಾತ್ಕಾಲಿಕವಾದ ಶಕ್ತಿಯನ್ನು ಕಳೆದು ಕೊಂಡ ಆ ಮೂರ್ತಿಪೂಜಕ, ಚಕ್ರಾಧಿಪತ್ಯ ಹೊಂದಿಕೊಂಡ ರೋಮ್ ಆಗಿರುತ್ತದೆ. ಆದರೆ *ಅವಳು ಪಾಪ ಸಾಹೇಬನ (ಪೋಪನ) ಆಡಳಿತದಲ್ಲಿ ಅದನ್ನು ಪುನಃ ಗಳಿಸಿಕೊಂಡಳು. ನೀವು ಇದನ್ನು



ಆತ್ಮೀಕ ಕೂಡಿಸುವಿಕೆ ಆಗಿರಲಿಲ್ಲ. ಇಲ್ಲಯ್ಯಾ. ಈ ಹೆಂಗಸು ಚಿದೋನ್ಯರ ಅರಸನಾದ ಎತ್‌ಬಾಳ್ ಎಂಬಾತನ ಮಗಳಾಗಿದ್ದಳು, ಮತ್ತು ಅವನು ಅಸ್ತಾರ್ತೆಯ (ಅಶೇರ ವಿಗ್ರಹ) ಯಾಜಕನಾಗಿದ್ದನು. ಅವನು ಫೇಲೇಸನೆಂಬ ಅವನ ಪೂರ್ವಾಧಿಕಾರಿ ಯಾಗಿದ್ದವನನ್ನು ಕೊಂದು ಆ ಸಿಂಹಾಸನವನ್ನು ಪಡಕೊಂಡಿದ್ದನು. ಆದುದರಿಂದ ನಾವು ನೇರವಾಗಿ ಕಂಡುಕೊಳ್ಳುತ್ತೇವೇನೆಂದರೆ ಅವಳು ಆ ಕೊಲೆಗಡುಕನ ಮಗಳಾಗಿದ್ದಳು. (ಇದು ನಿಜವಾಗಿ ನಮಗೆ ಶಾಯಿನನ ವಿಷಯ ನೆನಪಿಗೆ ತರುತ್ತದೆ) ಮತ್ತು ಅವಳು ಇಸ್ರಾಯೇಲಿನ ಒಂದು ಭಾಗವಾದದ್ದು, ಒಂದು ಅನ್ಯ ಜನರ ಕೂಡಿಸುವಿಕೆಗಾಗಿ ದೇವರು ನೇಮಿಸಿದ ಆತ್ಮೀಕವಾದ ಮಾರ್ಗದ ಮೂಲಕವಾಗಿರಲಿಲ್ಲ; ಆದರೆ ಅವಳು ಇಸ್ರಾಯೇಲ್ಲರ ಹತ್ತು ಗೋತ್ರಗಳ ರಾಜನಾದ ಆಹಾಬನಿಗೆ ಮದುವೆಯಾಗುವದರ ಮೂಲಕವಾಗಿ, ಒಳಗೆ (ಇಸ್ರಾಯೇಲಿನ ಒಳಗೆ) ಬಂದಳು. ಈಗ ನಾವು ನೋಡಿದಂತೆ ಈ ಕೂಡಿಸುವಿಕೆಯು ಒಂದು ಆತ್ಮೀಕವಾದಂಥದ್ದಾಗಿರಲಿಲ್ಲ; ಅದು ಒಂದು ರಾಜ ನೀತಿಗೆ ಸಂಬಂಧಪಟ್ಟಂಥದ್ದಾಗಿತ್ತು. ಮತ್ತು ಈ ಮೂರ್ತಿ ಪೂಜೆಯಲ್ಲಿ ಮುಳುಗಿದಂಥ ಈ ಹೆಂಗಸಿಗೆ ಒಬ್ಬನೇ ನಿಜದೇವರ ಆರಾಧಕಳಾಗಲು ಯಾವ ರೀತಿಯ ಒಂದು ಅಪೇಕ್ಷ ಇರಲಿಲ್ಲ. ಆದರೆ ಅವಳು ಅದರ ಬದಲು ಇಸ್ರಾಯೇಲ್ಲರನ್ನು ಕರ್ತನಿಂದ ದೂರ ತಿರುಗಿಸುವ ಒಂದು ಶಪಥಹಾಕಲ್ಪಟ್ಟ ಉದ್ದೇಶದಿಂದ ಬಂದವಳಾಗಿದ್ದಳು. ಈಗ ಇಸ್ರಾಯೇಲ್ಲರಿಗೆ (ಆ ಹತ್ತು ಗೋತ್ರಗಳು) ಆ ಚಿನ್ನದ ಬಸವನನ್ನು ಪೂಜಿಸುವದೆಂದರೆ ಏನೆಂದು ಮೊದಲೇ ಗೊತ್ತಿತ್ತು. ಆದರೆ ಇದುವರೆಗೆ ಅವರು ಮೂರ್ತಿ ಪೂಜೆಯಲ್ಲಿ ಅಷ್ಟು ಕೆಳ ಮಟ್ಟಕ್ಕೆ ಇಳಿದಿರಲಿಲ್ಲ; ಯಾಕೆಂದರೆ ಮೋಶೆಯ ನಿಯಮಗಳು ಪಾಲಿಸಲ್ಪಡುತ್ತಿದ್ದವು; ಮತ್ತು ಅವರು ದೇವರನ್ನು ಆರಾಧಿಸುತ್ತಿದ್ದರು. ಆದರೆ ಆಹಾಬನು ಇಜಿಬೇಲಳನ್ನು ಮದುವೆಯಾದ ದಿನದಿಂದ ಆ ಮೂರ್ತಿ ಪೂಜೆಯು ಮರಣಕರವಾದ ರೀತಿಯಲ್ಲಿ ಮುಂದುವರೆಯಿತು. ಈ ಹೆಂಗಸು ಅವಳು ಸ್ಥಾಪಿಸಿದ ಅಸ್ತಾರ್ತೆಯ (ವೀನಸ್) ಮತ್ತು ಬಾಳನ (ಸೂರ್ಯ ದೇವತೆ) ಆ ದೇವಸ್ಥಾನದಲ್ಲಿ ಯಾಜಕಿಯಾದ ಸಮಯದಿಂದ ಇಸ್ರಾಯೇಲ್ಲರು ಅವಳ ಜೀವನದ ಒಂದು ವಿಷಮ ಪರಿಸ್ಥಿತಿಗೆ ಬಂದರು.

8. ಇದನ್ನು ಮನಸ್ಸಿನಲ್ಲಿಟ್ಟುಕೊಂಡು, ಈಗ ನಾವು ಈ ಧುವತ್ಯೆರ ಯುಗದಲ್ಲಿ ದೇವರಾತ್ಮವು ಏನುಮಾಡುತ್ತದೆ ಎಂಬದನ್ನು ನೋಡಲು ನಾವು ಪ್ರಾರಂಭಮಾಡಬಹುದು. ಅದು ಇಲ್ಲಿದೆ.

9. ಆಹಾಬನು ಇಜೆಬೇಲಳನ್ನು ಮದುವೆಯಾದನು ಮತ್ತು ಇದು ಅವನು ತನ್ನ ರಾಜ್ಯವನ್ನು ಬಲಪಡಿಸಲು ಮತ್ತು ಭದ್ರಪಡಿಸಲು ಮಾಡಿದ ಒಂದು ರಾಜಕೀಯ ಯುಕ್ತಿಯಾಗಿತ್ತು. ಇದು ಸರಿಯಾಗಿ ಆ ಸಭೆಯು (ವಧುವು) ಕೋನ್‌ಸ್ಟೆಂಟ್ಯಾನ್‌ನ ಕೆಳಗೆ ತನ್ನನ್ನು ಒಪ್ಪಿಸಿ ಕೊಟ್ಟಾಗ ಮಾಡಿದ ವಿಷಯದಂತಿದೆ. ಅವರಿಬ್ಬರೂ ಅದಕ್ಕೆ ಒಂದು ಆತ್ಮೀಕ ರೂಪವನ್ನು ಕೊಟ್ಟರೂ ರಾಜಕೀಯ ಕಾರಣಕ್ಕಾಗಿ ಒಟ್ಟಾದರು. ಈಗ ಕೂನ್‌ಸ್ಟೆಂಟಾಯಿನ್ ಒಬ್ಬ ಕ್ರೈಸ್ತನಾಗಿದ್ದಾನೆಂದು ನನ್ನನ್ನು ಯಾರೂ ಒಪ್ಪುವಂತೆ ಮಾಡಲು ಸಾಧ್ಯವಿಲ್ಲ. ಅವನು ಒಬ್ಬ ಕ್ರೈಸ್ತ ಬಲೆಯಂತೆ ಕಾಣುವ ಒಬ್ಬ ವಿಗ್ರಹಾರಾಧಕನಾಗಿದ್ದನು. ಅವನು ಸೈನಿಕರ ಗುರಾಣೆಯಲ್ಲಿ ಬಿಳೀಬಣ್ಣದ ಕ್ರೂಜೆಗೆಳನ್ನು ಚಿತ್ರಿಸಿದನು. ಅವನು ''ಕೊಲಂಬಸನ ವೀರರು'' ಅದರ ಮೂಲಪಿತೃವಾಗಿದ್ದನು. ಅವನು ಸಂತ ಸೋಧಿಯಾನ ಚೂಪು ಗೋಪುರದ ಮೇಲೆ ಒಂದು ಸಂಪ್ರದಾಯವನ್ನು ಪ್ರಾರಂಭಿಸಿದನು.

10. ಮೂರ್ತಿಪೂಜಕರು, ನಾಮಧೇಯ ಕ್ರೈಸ್ತರು ಮತ್ತು ನಿಜವಾದ ಕ್ರೈಸ್ತರನ್ನು, ಎಲ್ಲರನ್ನೂ ಒಟ್ಟುಗೂಡಿಸುವದು ಕೊನ್‌ಸ್ಟೆಂಟಾಯಿನನ ಯೋಜನೆಯಾಗಿತ್ತು. ಮತ್ತು ಸ್ವಲ್ಪ ಸಮಯಕ್ಕೋಸ್ಕರ, ಅವನು ಜಯಹೊಂದುವನೋ ಎಂದು ಕಾಣುತ್ತಿತ್ತು. ಯಾಕಂದರೆ ನಿಜ ವಿಶ್ವಾಸಿಗಳು ಸಹ ವಾಕ್ಯದಿಂದ ದೂರ ಹೋದವರನ್ನು ಹಿಂದೆ ಪುನಃ ತರಬಹುದೋ ಎಂದು ನೋಡಲು ಅವನೊಂದಿಗೆ ಬಂದರು. ಅವರು ಅವರನ್ನು (ಬಿದ್ದುಹೋದವರನ್ನು) ಪುನಃ ಸತ್ಯಕ್ಕೆ ತರಲು ಸಾಧ್ಯವಾಗುವದಿಲ್ಲ ಎಂದು ನೋಡಿದಾಗ; ಅವರು ಆ ರಾಜಕೀಯ ಸಂಸ್ಥೆಯಿಂದ ಬಿಟ್ಟು ಹೋಗಲು ಬಲುತ್ಕಾರ ಮಾಡಲ್ಪಟ್ಟರು, ಮತ್ತು ಅವರು ಹಾಗೆ ಮಾಡಿದಾಗ, ಅವರು ಧರ್ಮನಿಂದಕರು ಎಂದು ಕರೆಯಲ್ಪಟ್ಟರು ಮತ್ತು ಹಿಂಸೆಗೊಳಗಾದರು.

11. ಈಗಲೂ, ಈ ಸಮಯದಲ್ಲಿ ಅದೇ ಸಂಗತಿಗಳು ನಡೆಯುತ್ತಿರುವದನ್ನು ನಾವು ನೋಡುತ್ತಿದ್ದೇವೆ. ಎಂದು ನಾನು ಹೇಳುವವನಾಗಿದ್ದೇನೆ. ಎಲ್ಲಾ



ಇದು ಪ್ರಕಟಣೆ 18:9-17 ರಲ್ಲಿ ಹೇಳಲ್ಪಟ್ಟಿದೆ. ಅದು ಭೂರಾಜರೊಂದಿಗೆ, ಅರಸುಗಳೊಂದಿಗೆ, ವ್ಯಾಪಾರಿಗಳೊಂದಿಗೆ, ಅವಳ ಹೊಕ್ಕು ಬಳಿಕೆಯನ್ನು ತೋರಿಸುತ್ತದೆ, ಅವಗೆಲ್ಲರಿಗೆ ರೋಮಿನೊಂದಿಗೂ, ವ್ಯಾಪಾರ ವ್ಯವಹಾರದೊಂದಿಗೂ ಸಂಬಂಧವಿದೆ.

32. ಪ್ರಕಟಣೆ 13:14 ರಲ್ಲಿ ಆ ಮೃಗವು ತನಗೋಸ್ಥರ ಕಟ್ಟಲ್ಪಟ್ಟ ಪ್ರತಿಮೆ (Image) ಯ ಮೂಲಕ ಅವನ ಪ್ರಭಾವವನ್ನು ಪ್ರಚುರಗೊಳಿಸುತ್ತಾನೆ ಎಂದು ನಾವು ಕಂಡುಕೊಳ್ಳುವವರಾಗಿದ್ದೇವೆ. ಮಾಡಲ್ಪಟ್ಟ ಪ್ರತಿಮೆ ಲೋಕದಲ್ಲೆಲ್ಲೂ ಪ್ರಸರಿಸಿರುವ ★ಎಕ್ಯೂಮೆನಿಕಲ್ ಕೌನ್ಸಿಲ್ (ವಿಶ್ವ ಕ್ರೈಸ್ತ ಸಂಸ್ಥೆ) ಆಗಿದೆ, ಅಲ್ಲಿ ಎಲ್ಲಾ ಸಂಸ್ಥಾಪಿಸಲ್ಪಟ್ಟ ಸಭೆಗಳು ಆ ರೋಮನ್ ಕೆಥೋಲಿಕ್ ಸಭೆಯೊಂದಿಗೆ ಒಂದಾಗುವರು. (ಅವರು ಈಗಲೂ ಸಹ ಅದನ್ನೇ ಮಾಡುತ್ತಾರೆ) ಸಮಾಜವಾದದ (Communism) ಶಕ್ತಿಯನ್ನು ನಿಲ್ಲಿಸಲು ಈ ಐಕ್ಯತ್ವವು ಬರುತ್ತದೆ ಎಂಬುದು ಬಹಳ ಸಂಭವನೀಯವಾಗಿದೆ. ಅದರೆ ನೆಬೂಕದ್ನೆಚ್ಚರನಂತೆ ಈ ಸಮಾಜವಾದವು ಆ ವೇಶ್ಯೆಯ ಮಾಂಸವನ್ನು ಸುಟ್ಟುಬಿಡುವುದಕ್ಕಾಗಿ ಎಚ್ಚರಿಸಲ್ಪಟ್ಟಂತೆ, ರೋಮ್ ಸೋಲಿಸಲ್ಪಟ್ಟು ನಾಶಮಾಡಲ್ಪಡುವದು. ಈ ರೋಮನ್ ಸಭೆ ಹೋದಲ್ಲೆಲ್ಲಾ ಆ ಸಮಾಜವಾದವು ಅದರ ಹಿಂದಿನಿಂದ ಹೋಗಿದೆ ಎಂದು ಲಕ್ಷದಲ್ಲಿಡಿರಿ. ಅದು ಆ ರೀತಿ ಇರಲೇಬೇಕು. ಈಗ ನಾನು ನಿಮ್ಮನ್ನು ಎಚ್ಚರಿಸುತ್ತೇನೆ. ಸಮಾಜವಾದವು ನಿಮ್ಮ ಒಂದೇ ವೈರಿ ಎಂದು ನೆನಸಬೇಡಿರಿ. ಇಲ್ಲಯ್ಯಾ, ಅದು ಕೆಥೋಲಿಕ್ ಸಭೆ ಸಹ ಆಗಿರುತ್ತದೆ. ಅದಕ್ಕಿಂತಲೂ ಕಮ್ಯೂನಿಜಂಗಿಂತಲೂ (ಸಮಾಜವಾದ) ಹೆಚ್ಚಾಗಿ.

33. **ಈಗ ಪ್ರಕಟಣೆ 13:1-4 ವಚನಗಳನ್ನು ಓದಿ ಅದನ್ನು ಪ್ರಕಟಣೆ 12:1-5 ರೊಂದಿಗೆ ಹೋಲಿಸಿ ನೋಡೋಣ. ಪ್ರಕಟಣೆ 13:1-4 ''(ಮತ್ತು ನಾನು ಸಮುದ್ರದ ಮರಳಿನ ಮೇಲೆ ನಿಂತೆನು, ಮತ್ತು,) ಸಮುದ್ರದಿಂದ ಮೃಗವು ಏರಿ ಬರುವುದನ್ನು ಕಂಡೆನು. ಅದಕ್ಕೆ ಏಳು ತಲೆಗಳೂ, ಹತ್ತು ಕೊಂಬುಗಳೂ, ಕೊಂಬುಗಳ ಮೇಲೆ ದೇವದೂಷಣ ನಾಮಗಳೂ ಇದ್ದವು. ನಾನು ಕಂಡ ಮೃಗವು ಚಿರತೆಯಂತಿತ್ತು, ಅದರ ಕಾಲುಗಳು ಕರಡಿಯ ಕಾಲುಗಳಂತೆಯೂ ಅದರ ಬಾಯಿ**

ಮಾತಾಡುವದು; ತನಗೆ ನಮಸ್ಕರಿಸಿದವರೆಲ್ಲರಗೂ ಮರಣದಂಡನೆ ಆಗುವಂತೆ ಮಾಡುವದು. ಈ ಎರಡನೆಯ ಮೃಗವು - ದೊಡ್ಡವರು, ಚಿಕ್ಕವರು, ಐಶ್ವರ್ಯವಂತರು, ಬಡವರು, ಸ್ವತಂತ್ರರು, ದಾಸರು ಎಲ್ಲರೂ ತಮ್ಮ ತಮ್ಮ ಬಲಗೈಯ ಮೇಲಾಗಲಿ, ಹಣೆಯ ಮೇಲಾಗಲಿ ಗುರುತು ಹೊಂದಬೇಕೆಂತಲೂ, ಆ ಗುರುತು ಯಾರಿಗಿಲ್ಲವೋ ಅವರು ಕ್ರಯ ವಿಕ್ರಯಗಳನ್ನು ನಡೆಸಕೂಡದೆಂತಲೂ ಆಜ್ಞೆಮಾಡುತ್ತದೆ. ಆ ಗುರುತು ಯಾವದೆಂದರೆ ಮೊದಲನೆಯ ಮೃಗದ ಹೆಸರು ಅಥವಾ ಅದರ ಹೆಸರನ್ನು ಸೂಚಿಸುವ ಅಂಕೆ.

ಇದರಲ್ಲಿ ಜ್ಞಾನವು ಅಡಕವಾಗಿದೆ. ಬುದ್ಧಿವಂತನು ಆ ಮೃಗದ ಅಂಕೆಯನ್ನು ಎಣಿಸಲಿ; ಅದು ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆಯಾಗಿದೆ; ಅದರ ಅಂಕೆಯು ಆರುನೂರ ಅರವತ್ತಾರು.

30. ಈ ಅಧ್ಯಾಯವು ರೋಮನ್ ಕೆಥೋಲಿಕ್ ಸಭೆಯ ಶಕ್ತಿಯನ್ನು ಮತ್ತು ಸಂಸ್ಥಾಪನೆಯ ಮೂಲಕ ಅವಳು ಏನು ಮಾಡುವಳೆಂಬುದನ್ನು ತೋರಿಸುತ್ತದೆ. ಇದು ಸುಳ್ಳು ದ್ರಾಕ್ಷೇ ಬಳ್ಳಿಯಾಗಿದೆ ಎಂದು ನೆನಪಿನಲ್ಲಿಡಿರಿ. ಅದು ಕರ್ತನ ಹೆಸರನ್ನು ಹೆಸರಿಸಲಿ, ಅದು ಹಾಗೆ ಮಾಡಿದರೂ ಅದನ್ನೂ ಒಂದು ಸಳ್ಳಾದ ರೀತಿಯಲ್ಲಿ ಮಾಡುತ್ತದೆ. ಅದರ ಶಿರಸ್ಸು ಕರ್ತನದಾಗಿರುವುದಿಲ್ಲ, ಆದರೆ ಸೈತಾನನದಾಗಿರುತ್ತದೆ. ಅದು ಕೊನೆಗೆ ಆ ಮೃಗದೊಂದಿಗೆ ಸಂಪೂರ್ಣವಾಗಿ ಹೊಂದಿಕೊಂಡು ಕೊನೆಗೊಳ್ಳುತ್ತದೆ. ಆ ಕಿರಮಂಜಿ *(ಕೆಂಪು) ಬಣ್ಣದ ಮೃಗದ ಮೇಲೆ ಸವಾರಿ ಮಾಡಿಕೊಂಡು ಬರುವ ಆ ವೇಶ್ಯೆಯು ಸ್ಪಷ್ಟವಾಗಿ ತೋರಿಸುತ್ತಾಳೇನೆಂದರೆ, ಅವಳ ಶಕ್ತಿಯು ಅದು ಒಂದು ಬಲಾತ್ಕಾರದ ದೇವರಾಗಿದ್ದಾನೆ. (ಸೈತಾನನು) ಮತ್ತು ನಮ್ಮ ದೇವರಾದ ಕರ್ತನಾದ ಯೇಸು ಕ್ರಿಸ್ತನಲ್ಲ.

31. 17ನೇ ವಚನದಲ್ಲಿ, ಅವಳು ಈ ಲೋಕದ ಎಲ್ಲಾ ವ್ಯಾಪಾರ ವ್ಯವಹಾರಗಳಲ್ಲಿ ಸಂಪೂರ್ಣ ಆಧಿಕಾರವನ್ನು ಹೊಂದಿಕೊಂಡಿರುವಳು ಎಂದು ಸ್ಪಷ್ಟವಾಗಿ ಹೇಳುತ್ತದೆ, ಯಾಕಂದರೆ ಅವಳ ಹೊರತು (ಅವಳ ಶಕ್ತಿಯಿಲ್ಲದೆ) ಯಾವ ಮನುಷ್ಯನೂ ಏನನ್ನೂ ಮಾಡಲಾರನು ಅಥವಾ ಕೊಂಡುಕೊಳ್ಳಲಾರನು.



ಜನರೂ ಒಟ್ಟಿಗೆ ಬರುತ್ತಿದ್ದಾರೆ. ಯೆಹೂದ್ಯನಾಗಲೀ, ಕೆಥೋಲಿಕನಾಗಲೀ, ಪ್ರೊಟೆಸ್ಟೆಂಟನಾಗಲೀ ಅವರೆಲ್ಲರಿಗೂ ಸರಿಹೋಗುವಂಥ ಒಂದು ಬೈಬಲನ್ನು ಅವರು ಈಗ ಬರೆಯುತ್ತಿದ್ದಾರೆ. ಅವರೆಲ್ಲರಿಗೆ ಅವರದೇ ಆದ ನೈಸಿಯಾ ಕೌನ್ಸಿಲ್ ಇದೆ. ಆದರೆ ಅವರು ಅದನ್ನು ಎಕ್ಯೂಮೆನಿಕಲ್ ಕೌನ್ಸಿಲ್ (ಸಾರ್ವತ್ರಿಕ ಕ್ರೈಸ್ತ ಮಂತ್ರಾಲೋಚನ ಮಂಡಲ) ಎಂದು ಕರೆಯುತ್ತಾರೆ. ಮತ್ತು ಈ ಎಲ್ಲಾ ಸಂಸ್ಥೆಗಳು ಯಾರೊಂದಿಗೆ ಜಗಳವಾಡುತ್ತಾರೆ ಎಂದು ನಿಮಗೆ ತಿಳಿದದೆಯೋ? ಅವರು ಆ ನಿಜವಾದ ಪರಿಚಾಶತ್ತಮಿಗಳೊಂದಿಗೆ (Pentecostals) ಜಗಳವಾಡುತ್ತಾರೆ. ನಾನು ಪೆಂಟಿಕೋಸ್ಟ್ ಎಂಬ ಸಂಸ್ಥೆಯ ವಿಷಯವಾಗಿ ಹೇಳುವುದಿಲ್ಲ. ಪವಿತ್ರಾತ್ಮದಿಂದ ತುಂಬಲ್ಪಟ್ಟವರಾಗಿ ತಮ್ಮೊಂದಿಗೆ ಚಿಹ್ನೆ ಮತ್ತು ಪವಿತ್ರಾತ್ಮನ ದಾನವಿದ್ದು, ಸತ್ಯದಲ್ಲಿ ನಡೆಯುವದರ ಮೂಲಕವಾಗಿ, ಮತ್ತು ಅದರಿಂದಾಗಿ ಪೆಂಟಿಕೋಸ್ಟ್ ಎಂದು ಕರೆಯಲ್ಪಡುವವರ ವಿಷಯವಾಗಿ ನಾನು ಹೇಳುವವನಾಗಿದ್ದೇನೆ.

12. ಆಹಾಬನು ರಾಜಕೀಯ ಕಾರಣಕ್ಕಾಗಿ ಇಜೆಬೇಲಳನ್ನು ಮದುವೆಯಾದಾಗ ಅವನು ತನ್ನ ಹಿರೀತನದ ಹಕ್ಕನ್ನು ಮಾರಿಬಿಟ್ಟನು. ಸಹೋದರನೇ, ನೀನು ಇದನ್ನು ನಂಬು ಅಥವಾ ನಂಬದಿರು, ಆದರೆ ನೀನು ಒಂದು ಸಂಸ್ಥೆಯೊಂದಿಗೆ (ಸಂಪ್ರದಾಯ ಸಭೆ) ಸೇರಿದಾಗ ನೀನು ಅದಾಗಲೇ ನಿನ್ನ ಹಿರೀತನದ ಹಕ್ಕನ್ನು ಮಾರಿಬಿಟ್ಟವನಾಗಿದ್ದೀ. ಎಂದಾದರೂ ಹೊರ ಬಂದು ಪುನಃ ಹಿಂದೆ ಹೋದಂತಹ ಪ್ರತಿಯೊಂದು ಪ್ರೊಟೆಸ್ಟೆಂಟ್ ಗುಂಪು (ಪೋಪನ ಮತಕ್ಕೆ ವಿರೋಧಿಯಾದವರು) ತಮ್ಮ ಹಿರೀತನದ ಹಕ್ಕನ್ನು ಮಾರಿಬಿಟ್ಟವರಾಗಿದ್ದಾರೆ, ಮತ್ತು ನೀನು ನಿನ್ನ ಜನ್ಮಸಿದ್ಧ ಹಕ್ಕನ್ನು (ಹಿರೀತನ) ಮಾರಿಬಿಟ್ಟಾಗ ನೀನು ಸರಿಯಾಗಿ ಏಸಾವನಂತೆ ಆಗಿದ್ದೀ. ನೀನು ನಿನಗೆ ಬೇಕಾದಷ್ಟು ಕೂಗಬಹುದು, ಪಶ್ಚಾತ್ತಾಪ ಪಡಬಹುದು. ಆದರೆ ಅದರಿಂದ ನಿನಗೆ ಏನು ಪ್ರಯೋಜನವಾಗದು. ಅಲ್ಲಿ ನೀನು ಮಾಡಬಹುದಾದ ಒಂದೇ ಒಂದು ವಿಷಯವಿದೆ, ಅದೇನೆಂದರೆ, ''ನನ್ನ ಜನರೇ, ಅವಳಿಂದ ಹೊರಬನ್ನಿರಿ, ಮತ್ತು ಅವಳ ಪಾಪದಲ್ಲಿ ಪಾಲುಗಾರರಾಗಬೇಡಿರಿ!'' ಈಗ ನಾನು ಹೇಳುವದು ಸರಿಯಲ್ಲವೆಂದು ನೀವು ಎಣಿಸುವದಾದರೆ, ಈ ಒಂದು ಪ್ರಶ್ನೆಗೆ ಉತ್ತರ ಕೊಡಿರಿ, ಯಾವ ಸಭೆ ಅಥವಾ

ದೇವರ ಯಾವ ಕಾರ್ಯವೇ ಆಗಲಿ, ಅದು ಎಂದೂ ಭಕ್ತಿಸಂಜೀವನ ಹೊಂದಿದ ನಂತರ, ಒಂದು ಸಂಸ್ಥೆಗೆ ಸೇರಿ, ಸಂಪ್ರದಾಯ ಸಭೆ ಆದನಂತರ ಹಿಂದೆ ಬಂದದ್ದು ಇದೆ ಎಂದು ಯಾವ ಜೀವಿಸುವ ಮನುಷ್ಯನಾದರೂ ನನಗೆ ಹೇಳಬಲ್ಲನೇ? ನಿಮ್ಮಲ್ಲಿರುವ ಚರಿತ್ರೆಗಳನ್ನು ಓದಿರಿ. ನೀವು ಅಲ್ಲಿ ಒಂದು ಉದಾಹರಣೆಯನ್ನೂ ಕಂಡುಕೊಳ್ಳಲಾರಿರಿ - ಒಂದು ಸಹ ಇಲ್ಲ.

13. ಇಸ್ರಾಯೇಲ್ ರಾಜಕೀಯ ಕಾರಣಕ್ಕಾಗಿ ತನ್ನ ಆತ್ಮಿಕ ಸಂಗತಿಗಳನ್ನು ಬಿಟ್ಟು ಲೋಕದೊಂದಿಗೆ ಸೇರಿಕೊಂಡಾಗ ಅದು ಮಧ್ಯರಾತ್ರಿಯಾಗಿತ್ತು. (ಕಾರ್ಗತ್ತಲು) ನೈಸಿಯಾದಲ್ಲಿ ಸಭೆ ಅದೇ ಸಂಗತಿಯನ್ನು ಮಾಡಿದಾಗ ಅದು ಮಧ್ಯರಾತ್ರಿಯಾಗಿತ್ತು. ಈಗಲೂ ಆ ಸಭೆಗಳೆಲ್ಲ ಒಂದು ಕೂಡಿ ಬರುವಾಗಲೂ ಅದು ಮಧ್ಯರಾತ್ರಿಯಾಗಿದೆ.

14. ಈಗ ಆಹಾಬನು ಇಜೆಬೇಲಳನ್ನು ಮದುವೆಯಾದಾಗ, ಅವಳು ಆ ರಾಜ್ಯದ ಹಣವನ್ನು ಉಪಯೋಗಿಸಿ, ಅಸ್ಟಾರ್ತೆ ಮತ್ತು ಬಾಳ್ ದೇವತೆಗಳಿಗೆ ಎರಡು ದೊಡ್ಡ ಪೂಜೆಯ ಗುಡಿಗಳನ್ನು ಕಟ್ಟಲು, ಅವನು ಅನುಮತಿ ಕೊಟ್ಟನು. ಬಾಳ್ ದೇವತೆಗೆ ಕಟ್ಟಿದ ಗುಡಿಯು, ಎಲ್ಲಾ ಇಸ್ರಾಯೇಲ್ ಬಂದು ಅಲ್ಲಿ ಪೂಜಿಸುವಷ್ಟು ದೊಡ್ಡದಾಗಿತ್ತು. ಮತ್ತು ಕೋನ್‌ಸ್ಟೆಂಟಾಯಿನ್ ಮತ್ತು ಆ ಸಭೆ (ಸೇರಿಕೊಂಡಾಗ) ಮದುವೆಯಾದಾಗ, ಅವನು ದೇವಾಲಯದ ಕಟ್ಟಡಗಳನ್ನು ಕಟ್ಟಿದನು. ಮತ್ತು ಅಲ್ಲಿ ಯಜ್ಞವೇದಿ ಮತ್ತು ವಿಗ್ರಹಗಳನ್ನು ಇಟ್ಟನು, ಮತ್ತು ಅಲ್ಲಿ ಆಗಲೇ ತಯಾರಾಗುತ್ತಿದ್ದ, ಕ್ರಮಬದ್ಧವಾದ ಪುರೋಹಿತ ಪ್ರಭುತ್ವವನ್ನು ಸ್ಥಾಪಿಸಿದನು (ಅಂದರೆ - ಪೋಪ ಸಾಹೇಬರು ಬಿಶೋಪರು - ಇತ್ಯಾದಿ)

15. ಇಜೆಬೇಲಳು ತನ್ನ ಬೆಂಬಲದಲ್ಲಿ ರಾಜ್ಯದ ಶಕ್ತಿಗಳನ್ನು ಹೊಂದಿ ಕೊಂಡಾಗ, ಅವಳು ಜನರಮೇಲೆ ತನ್ನ ಧರ್ಮವನ್ನು ಬಲಾತ್ಕಾರವಾಗಿ ಜಾರಿಗೆ ತಂದಳು, ಮತ್ತು ದೇವರ ಪ್ರವಾದಿಗಳನ್ನೂ, ಯಾಜಕರನ್ನೂ ಕೊಂದು ಹಾಕಿದಳು. ಅದು ಎಷ್ಟು ಕೆಟ್ಟು ಹೋಯಿತೆಂದರೆ, ಆ ಸಮಯದ ದೂತನಾದ ಎಲೀಯನು, ತಾನೊಬ್ಬನೇ ಉಳಿದಿದ್ದೇನೆ ಎಂದು ಎಣಿಸಿದನು; ಆದರೆ ದೇವರ ಕೈಯಲ್ಲಿ ಬಾಳನ ಮುಂದೆ ಅಡ್ಡಬೀಳದ ಇನ್ನೂ 7000 ಮಂದಿ ಇದ್ದರು. ಆದರೆ ಈಗಾಗಲೇ



ದೂಷಣೆಯ ಮಾತುಗಳನ್ನೂ ಆಡುವ ಬಾಯಿ ಅದಕ್ಕೆ ಕೊಡಲ್ಪಟ್ಟಿತು. ಮತ್ತು ನಾಲ್ವತ್ತೆರಡು ತಿಂಗಳ ಪರ್ಯಂತರ ತನ್ನ ಕಾರ್ಯಗಳನ್ನು ನಡೆಸುವ ಅಧಿಕಾರವೂ ಅದಕ್ಕೆ ಕೊಡಲ್ಪಟ್ಟಿತ್ತು. ಅದು ಬಾಯಿ ತೆರೆದು ದೇವರನ್ನು ದೂಷಿಸಿದ್ದಲ್ಲದೆ ಆತನ ನಾಮವನ್ನೂ ಆತನ ನಿವಾಸವನ್ನೂ ಪರಲೋಕ ನಿವಾಸಿಗಳನ್ನೂ ದೂಷಿಸಿತು. ಇದಲ್ಲದೆ ದೇವ ಜನರ ಮೇಲೆ ಯುದ್ಧಮಾಡಿ ಅವರನ್ನು ಜಯಿಸುವದಕ್ಕೆ ಅದಕ್ಕೆ ಅಧಿಕಾರ ಕೊಡಲ್ಪಟ್ಟಿತು. ಮತ್ತು ಸಕಲ ಕುಲ, ಪ್ರಜೆ ಭಾಷೆ ಜನಾಂಗಗಳ ಮೇಲೆ ಅದಕ್ಕೆ ಅಧಿಕಾರವು ಕೊಡಲ್ಪಟ್ಟಿತು. ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಯಾದಾತನ ಬಳಿಯಲ್ಲಿರುವ ಜೀವಬಾಧ್ಯರ ಪಟ್ಟಿಯಲ್ಲಿ ಯಾರ್‍ಯಾರ ಹೆಸರುಗಳು ಬರೆದಿರುವದಿಲ್ಲವೋ ಆ ಭೂನಿವಾಸಿ ಗಳೆಲ್ಲರೂ ಅದಕ್ಕೆ ನಮಸ್ಕಾರ ಮಾಡುವರು. ಕಿವಿಯುಳ್ಳವನು ಕೇಳಲಿ. ಸೆರೆ ಹಿಡಿಯುವವನು ತಾನೇ ಸೆರೆಗೆ ಹೋಗುವನು; ಕತ್ತಿಯಿಂದ ಕೊಲ್ಲುವವನು ಕತ್ತಿಯಿಂದಲೇ ಸಾಯಬೇಕು. ಇದರಲ್ಲಿ ದೇವ ಜನರ ತಾಳ್ಮೆಯೂ ನಂಬಿಕೆಯೂ ತೋರಿಬರುತ್ತವೆ.

ಮತ್ತೊಂದು ಮೃಗವು ಭೂಮಿಯೊಳಗಿಂದ ಬರುವದನ್ನು ಕಂಡೆನು. ಇದಕ್ಕೆ ಟಗರಿಗಿರುವಂತೆ ಎರಡು ಕೊಂಬುಗಳಿದ್ದವು; ಘಟಸರ್ಪದಂತೆ ಮಾತಾಡಿತು. ಈ ಮೃಗವು ಮೊದಲನೆಯ ಮೃಗದ ಅಧಿಕಾರವನ್ನೆಲ್ಲಾ ಅದರ ಸನ್ನಿಧಿಯಲ್ಲೇ ನಡೆಸುತ್ತದೆ. ಇದು ಮರಣಕರವಾದ ಗಾಯ ವಾಸಿಯಾದ ಮೊದಲನೆಯ ಮೃಗಕ್ಕೆ ಭೂಲೋಕವೂ, ಭೂನಿವಾಸಿಗಳೂ ನಮಸ್ಕರಿಸುವಂತೆ ಮಾಡುವಂಥದಾಗಿದೆ. ಇದು ಮಹತ್ತಾದ ಸೂಚಕ ಕಾರ್ಯಗಳನ್ನು ನಡೆಸುತ್ತದೆ; ಜನರ ಮುಂದೆ ಬೆಂಕಿಯು ಆಕಾಶದಿಂದ ಭೂಮಿಗೆ ಇಳಿದುಬರುವಂತೆಯಾದರೂ ಮಾಡುವದು. ಆ ಮೊದಲನೆಯ ಮೃಗದ ಸನ್ನಿಧಿಯಲ್ಲಿ ಮಹತ್ಕಾರ್ಯಗಳನ್ನು ಮಾಡುವ ಅಧಿಕಾರವಿರುವದರಿಂದ ಭೂನಿವಾಸಿಗಳನ್ನೂ ಮರಳುಗೊಳಿಸುತ್ತದೆ; ಅವರಿಗೆ - ಶಕ್ತಿಯಿಂದ ಗಾಯಹೊಂದಿ ಸಾಯದೆ ಬದುಕಿದ ಮೃಗದ ಘನಕ್ಕಾಗಿ ವಿಗ್ರಹವನ್ನು ಮಾಡಿಸಿಕೊಳ್ಳಬೇಕೆಂದು ಬೋಧಿಸುತ್ತದೆ. ಇದಲ್ಲದೆ ಆ ಮೃಗದ ವಿಗ್ರಹಕ್ಕೆ ಜೀವಕೊಡುವ ಸಾಮರ್ಥ್ಯವು ಇದಕ್ಕೆ ದೊರೆಯಿತು. ಆ ಮೃಗದ ವಿಗ್ರಹವು

ಸುಡಲ್ಪಡಬೇಕಿತ್ತು. ಆದರೆ ಅದಾಮನು ಮಧ್ಯವರ್ತಿಸಿ ಅವಳು ರಕ್ಷಿಸಲ್ಪಡು ವಂತೆ ಆಕೆಯನ್ನು ಕೂಡಲೇ ತನ್ನೊಂದಿಗೆ ತೆಗೆದುಕೊಂಡನು. ಆದರೆ ಈ ಪೈಶಾಶಿಕ ಧರ್ಮವು (ರೋಮನ್ ಕೆಥೋಲಿಕ್) ಈ ಕಾಲಗಳಲ್ಲಿ ತುಂಬಿ ತುಳುಕಿದಾಗ, ಅಲ್ಲಿ ಮಧ್ಯಸ್ಥಿಕೆ ಮಾಡಲು ಯಾರೂ ಇಲ್ಲವಾಗುವರು, ಮತ್ತು ಅವಳು ಅವಳನ್ನು ಭ್ರಷ್ಟಗೊಳಿಸುವಾತನೊಂದಿಗೆ ಸುಡಲ್ಪಡುವಳು, ಯಾಕಂದರೆ ಆ ವೇಶ್ಯೆ ಮತ್ತು ಅವಳ ಮಕ್ಕಳು ಮತ್ತು ಆ ಅಂತಿಕ್ರಿಸ್ತನು ಮತ್ತು ಸೈತಾನನು, ಅವರೆಲ್ಲರೂ ಆ ಬೆಂಕಿಯ ಕೊಂಡದಲ್ಲಿ ತಮ್ಮನ್ನು ಕಂಡುಕೊಳ್ಳುವರು.

29. ಇಲ್ಲಿಯೇ ನಾನು ಎಣಿಸಿದ ವಿಷಯಕ್ಕಿಂತ ಮುಂದೆ ಹೋಗುತ್ತಾ ಇದ್ದೇನೆ, ಮತ್ತು ಒಂದುವೇಳೆ ನಾನು 'ಕಡೇ ದಿನ''ದ ಸಂದೇಶಕ್ಕಾಗಿ ಇದನ್ನು ಕಾಪಾಡಿಕೊಳ್ಳಬೇಕಾಗಿರುವದು, ಆದರೆ ಈಗಲೇ ಅದನ್ನು ಹೇಳುವದು ಉಚಿತವಾಗಿ ಕಾಣುತ್ತದೆ, ಯಾಕಂದರೆ ಅದು 'ಸಂಸ್ಥೆ' ಮತ್ತು ಅದರ ಮೂಲಕವಾಗಿ ಏನಾಗುತ್ತದೆ ಎಂಬುದರ ವಿಷಯವಾಗಿ ಸ್ಪಷ್ಟವಾಗಿ ಮಾತನಾಡುತ್ತದೆ. ಮತ್ತು ನಾನು ನಿಮ್ಮನ್ನು ಎಚ್ಚರಿಸಲು ಬಯಸುವವನಾಗಿದ್ದೇನೆ. ಪ್ರಕಟಣೆ 13:1-18. "[ಮತ್ತು ನಾನು ಸಮುದ್ರದ ಮರಳಿನ ಮೇಲೆ ನಿಂತೆನು, ಮತ್ತು]", ಸಮುದ್ರದಿಂದ ಮೃಗವು ಏರಿ ಬರುವುದನ್ನು, ಕಂಡೆನು, ಅದಕ್ಕೆ ಏಳು ತಲೆಗಳೂ, ಹತ್ತು ಕೊಂಬುಗಳೂ ಕೊಂಬುಗಳ ಮೇಲೆ ಹತ್ತು ಮುಕಟಗಳೂ ತಲೆಗಳಮೇಲೆ ದೇವರ ದೂಷಣ ನಾಮಗಳೂ ಇದ್ದವು. ನಾನು ಕಂಡ ಮೃಗವು ಚಿರತೆಯಂತಿತ್ತು, ಅದರ ಕಾಲುಗಳು ಕರಡಿಯ ಕಾಲುಗಳಂತೆಯೂ ಅದರ ಬಾಯಿ ಸಿಂಹದ ಬಾಯಿಯಂತೆಯೂ ಇದ್ದವು. ಅದಕ್ಕೆ ಘಟಸರ್ಪನು ಶಕ್ತಿಯನ್ನೂ ಸಿಂಹಾಸನವನ್ನೂ ಮಹಾ ಅಧಿಕಾರವನ್ನೂ ಕೊಟ್ಟನು. ಅದರ ತಲೆಗಳಲ್ಲಿ ಒಂದು ತಲೆ ಗಾಯ ಹೊಂದಿ ಸಾಯುವ ಹಾಗಿರುವನ್ನು ಕಂಡೆನು. ಆ ಮರಣಕರವಾದ ಗಾಯವು ವಾಸಿಯಾಯಿತು; ಭೂಲೋಕದವರೆಲ್ಲರೂ ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು; ಘಟಸರ್ಪನು ಆ ಮೃಗಕ್ಕೆ ಅಧಿಕಾರವನ್ನು ಕೊಟ್ಟವನಾದ್ದರಿಂದ ಅವರು ಆ ಘಟಸರ್ಪನಿಗೆ ನಮಸ್ಕಾರ ಮಾಡುವವರಾದರು. ಇದಲ್ಲದೆ ಆ ಮೃಗಕ್ಕೂ ನಮಸ್ಕಾರ ಮಾಡಿ - ಈ ಮೃಗಕ್ಕೆ ಸಮಾನರು ಯಾರು? ಇದರ ಮೇಲೆ ಯುದ್ಧ ಮಾಡುವದಕ್ಕೆ ಯಾರು ಶಕ್ತರು? ಅಂದರು. ಬಡಾಯಿ ಮಾತುಗಳನ್ನೂ



ಆ ಸಂಪ್ರದಾಯ ಸಭೆಗಳ ಮಧ್ಯದಲ್ಲಿ ಅಂದರೆ ಬಾಪ್ಟಿಸ್ಟ್, ಮೆಥೋಡಿಸ್ಟ್, ಪ್ರಿಸ್ಬಿಟೇರಿಯನ್ ಮುಂತಾದ ಸಭೆಗಳ ಮಧ್ಯದಲ್ಲಿ, ಅಲ್ಲಿ, ಹೊರಬಂದು ದೇವರ ಬಳಿಗೆ ಹಿಂದೆ ಬರಬೇಕಾದ ಕೆಲವರು ಇದ್ದಾರೆ. ನಾನು ಈಗಲೂ, ಹಿಂದೆ ಎಂದೂ ಜನರಿಗೆ ವಿರೋಧವಾಗಿ ಇರಲಿಲ್ಲವೆಂದು ನೀವು ತಿಳಿದಿರಬೇಕೆಂದು ಅಪೇಕ್ಷಿಸುತ್ತೇನೆ. ನಾನು ಸಂಪ್ರದಾಯ ಸಭೆಯ - ಆ ಸಂಸ್ಥೆಯ ಕ್ರಮದ ವಿರೋಧವಾಗಿ ಇದ್ದೇನೆ. ನಾನು ಅದಕ್ಕೆ ವಿರೋಧವಾಗಿ ಇರಲೇಬೇಕು, ಯಾಕಂದರೆ ದೇವರು ಅದನ್ನು ದ್ವೇಷಿಸುತ್ತಾನೆ.

16. ನಾವು ಈಗ ಇಲ್ಲಿ ಒಂದು ನಿಮಿಷ ನಿಲ್ಲಿಸಿ, ಥುವಥೈರದಲ್ಲಿ ನಡೆಯುತ್ತಿದ್ದ ಅರಾಧನೆಯ ವಿಷಯ ನಾವು ಏನು ಮಾತಾಡುತ್ತಿದ್ದೆವು ಎಂಬದನ್ನು ಇನ್ನೊಂದುಸಾರೆ ನೋಡೋಣ. ನಾನು ಅವರು ಅಪೊಲ್ಲೊ ಎಂಬ ದೇವತೆಯನ್ನು (ಸೂರ್ಯ ದೇವರು) ಅವರ ರಾಜನೊಂದಿಗೆ ಪೂಜಿಸುತ್ತಿದ್ದರು. ಈ ಅಪೊಲ್ಲೊ ಎಂಬಾತನು ''ಕೆಟ್ಟದ್ದನ್ನು ದೂರ ಮಾಡುವವನು'' ಎಂದು ಕರೆಯಲ್ಪಡುತ್ತಿದ್ದನು. ಅವನು ಕೆಟ್ಟದ್ದನ್ನು ಜನರಿಂದ ದೂರಮಾಡುತ್ತಿದ್ದನು. ಅವನು ಅವರನ್ನು ಆಶೀರ್ವದಿಸಿದನು ಮತ್ತು ಅವರಿಗೆ ಒಂದು ನಿಜವಾದ 'ದೇವರು' ಆಗಿದ್ದನು. ಅವನು ಜನರಿಗೆ ಕಲಿಸುವಾತನು ಎಂದು ಗಣಿಸಲ್ಪಡು ತ್ತಿದ್ದನು. ಅವನು ಪೂಜೆಯ ವಿಷಯ, ದೇವಸ್ಥಾನದ ಆಚಾರ ಪದ್ಧತಿಯ ವಿಷಯ 'ದೇವರು'ಗಳ ಸೇವೆಯ ವಿಷಯ, ಯಜ್ಞದ ವಿಷಯ, ಮರಣ ಮತ್ತು ಮರಣದನಂತರ ಜೀವನದ ವಿಷಯ ಅವರಿಗೆ ವಿವರಿಸುತ್ತಿದ್ದನು. ಇದೆಲ್ಲವನ್ನು ಅವನು ಒಬ್ಬಳು ಪ್ರವಾದಿನಿಯ ಮೂಲಕ ಹೇಳಿದನು ಮತ್ತು ಅವಳು ಮೂರು ಕಾಲಿನ ಕುರ್ಚಿಯಲ್ಲಿ ಪ್ರವೇಶ ದ್ವಾರದ ಬಳಿ ಕುಳಿತು ಇದನ್ನೆಲ್ಲಾ ಹೇಳುತ್ತಿದ್ದಳು. ಓ! ಇದನ್ನು ನೀವು ನೋಡುತ್ತೀರೋ? ಇಲ್ಲಿ ಆ ಇಜೆಬೇಲಳೆಂಬ ಪ್ರವಾದಿನಿ ಇದ್ದಾಳೆ, ಮತ್ತು ಅವಳು ಜನರಿಗೆ ಕಲಿಸುತ್ತಿದ್ದಾಳೆ. ಮತ್ತು ಅವಳ . ಆ ಬೋಧನೆಯು, ದೇವರ ಸೇವಕರನ್ನು ಮನಸೆಳೆಯುವಂತೆ ಮಾಡಿ, ಅವರು ವ್ಯಭಿಚಾರ ಮಾಡಲು ಕಾರಣವಾಗುತ್ತದೆ. ಈಗ ವ್ಯಭಿಚಾರವೆಂದರೆ (ಆತ್ಮೀಕ ವ್ಯಭಿಚಾರ) 'ವಿಗ್ರಹಾರಾಧನೆ'. ಅದುವೇ ಅದರ ಆತ್ಮೀಕ ಅರ್ಥ. ಅದು ಒಂದು ಅನ್ಯಾಯವಾದ ಕೊಡುವಿಕೆಯಾಗಿದೆ. ಆಹಾಬನ ಮಿಲನ ಮತ್ತು

ಕೊನ್‌ಸ್ಟೆಂಟಾಯಿನನ ಮಿಲನ, ಇವೆರಡೂ ಅನ್ಯಾಯವಾದವುಗಳಾಗಿದ್ದವು, (ನ್ಯಾಯ ವಿರುದ್ಧವಾಗಿದ್ದವು) ಇಬ್ಬರೂ ಆತ್ಮೀಕ ವ್ಯಭಿಚಾರವನ್ನು ಮಾಡಿದರು. ಪ್ರತಿಯೊಬ್ಬ ವ್ಯಭಿಚಾರಿಯು ಬೆಂಕಿಯ ಕೊಂಡದೊಳಕ್ಕೆ ಹಾಕಲ್ಪಡುವೆನು. ದೇವರು ಆರೀತಿ ಹೇಳಿದ್ದಾನೆ.

17. ಈಗ, ಕೆಥೋಲಿಕ್ ಸಭೆಯ ಬೋಧನೆಯು ದೇವರ ವಾಕ್ಯವನ್ನು ನಿರಾಕರಿಸುತ್ತದೆ. (ಸಭೆಯು ಯಾವಾಗಲೂ ಸ್ತ್ರೀಗೆ ಹೋಲಿಸಲ್ಪಟ್ಟಿದೆ, ಅದು ಒಂದು ಸ್ತ್ರೀಯಾಗಿದೆ) ಆಧುನಿಕ ರೀತಿಯಲ್ಲಿ ನಿಜವಾಗಿ ಅಪೊಲ್ಲೋ ಆಗಿರುವ ಪೋಪನು, ಜನರಿಗೆ ವಿಗ್ರಹಗಳಿಗೆ ಹೊಂದಿ ಕೊಳ್ಳಲು ಕಲಿಸಿದನು. ರೋಮನ್ ಸಭೆಯು ಈಗ ಆ ಜನರಿಗೆ ಆ ಸುಳ್ಳು ಪ್ರವಾದಿನಿಯಾಗಿದ್ದಾಳೆ ಯಾಕಂದರೆ, ಅವಳು ಜನರಿಂದ ಕರ್ತನ ವಾಕ್ಯವನ್ನು ದೂರ ತೆಗೆದುಬಿಟ್ಟಿದ್ದಾಳೆ, ಮಾತ್ರವಲ್ಲದೆ ಪಾಪ ಪರಿಹಾರವು ಹೇಗೆ ಸಿಕ್ಕುತ್ತದೆ, ದೇವರ ಆಶೀರ್ವಾದವು ಹೇಗೆ ಸಿಕ್ಕುತ್ತದೆ ಎಂಬದಾಗಿ ತನ್ನದೇ ಆದ ಆಲೋಚನೆಗಳನ್ನು ಕೊಟ್ಟಿದ್ದಾಳೆ; ಮತ್ತು ಆ ಯಾಜಕರು (ಬೋಧಕರು) ತಮಗೆ ಜೀವನದ ಮೇಲೆ ಮಾತ್ರವಲ್ಲದೆ, ಮರಣದ ಮೇಲೆಯೂ ಅಧಿಕಾರವಿದೆ ಎಂದು ಸ್ಪಷ್ಟವಾಗಿ ಹೇಳುವಷ್ಟರ ಮಟ್ಟಿಗೆ ಮುಂದೆ ಹೋಗಿದ್ದಾರೆ. ಅವರದೇ ಆದ ಸಿದ್ಧಾಂತದ ಪ್ರಕಾರ ಅಲ್ಲಿ ಶುದ್ಧಿಲೋಕ ಉಂಟೆಂದು ಬೋಧಿಸುತ್ತಾರೆ. ಆದರೆ ಆ ವಚನದಲ್ಲಿ ನೀನು ಅದನ್ನು ಕಂಡು ಕೊಳ್ಳಲಾರಿ. ಪ್ರಾರ್ಥನೆ ಕ್ರೈಸ್ತರ ಧರ್ಮ ಸಮಾಜಗಳು ಮತ್ತು ಹಣ, ನಿನ್ನನ್ನು ಆ ಶುದ್ಧಿಲೋಕದಿಂದ ಹೊರ ತೆಗೆದು ಪರಲೋಕಕ್ಕೆ ನಿನ್ನನ್ನು ಕಳುಹಿಸುತ್ತದೆ ಎಂದು ಅವರು ಬೋಧಿಸುತ್ತಾರೆ. ಅದರ ಬೋಧನೆಯ ಮೇಲೆ ಆದರಿಸಲ್ಪಟ್ಟ ಆ ಸಂಪೂರ್ಣವಾದ ವ್ಯವಸ್ಥಾಪನೆಯು ಸುಳ್ಳಾಗಿದೆ. ಅದು ಆತನ ವಾಕ್ಯದಲ್ಲಿರುವ ದೇವರ ಪ್ರಕಟಣೆಯ ಭದ್ರವಾದ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟಿರುವುದಿಲ್ಲ. ಆದರೆ ಬದಲಾಗುವ, ಮುಳುಗುತ್ತಲಿರುವ ಅದರದೇ ಆದ ಪೈಶಾಚಿಕ ಅಸತ್ಯದ ಹೊಯಿಗೆಯ ಮೇಲೆ ಕಟ್ಟಲ್ಪಟ್ಟಿದೆ.

18. ಆ ಸಭೆಯು ನೇರವಾಗಿ ಸಂಸ್ಥೆಯಿಂದ, ಸಂಪ್ರದಾಯ ಸಭೆಯ ಕಡೆಗೆ ಮತ್ತು ಅದರ ಮೂಲಕವಾಗಿ ಸುಳ್ಳು ಬೋಧನೆಗೆ ಹೋಯಿತು. ಅದು ಸರಿ. ರೋಮನ್ ಕೆಥೋಲಿಕರ ದೇವರು ಆತನ ವಾಕ್ಯದಲ್ಲಿ ಇದ್ದಾನೆಂದು



ಕಾರಣವಾಗುತ್ತಾನೆ. ಆ ಮದುವೆಯು ಸಂಭವಿಸಿದ ಕೂಡಲೇ ಯೆಹೂದವು ಸತ್ತುಹೋಯಿತು. ಆತ್ಮೀಕ ಮರಣವು ಉಂಟಾಯಿತು. ರೋಮಿನ ಮೊದಲನೇ ಸಭೆ ಸಂಸ್ಥಾಪಿಸಿದ ಕೂಡಲೇ ಅದು ಸತ್ತುಹೊಯಿತು. ಲೂಥರನ್ ಸಭೆಯು ಸಂಸ್ಥಾಪಿಸಿದ ಕೂಡಲೇ, ಮರಣವು ಸಂಭವಿಸಿತು, ಮತ್ತು ಅವರು ಸತ್ತುಹೋದರು, ಕೊನೆಯರಾಗಿ ಪೆಂಟಾಕೋಸ್ಟ್ ಸಭೆ ಬಂತು, ಮತ್ತು ಅವರು ಸಂಸ್ಥಾಪನೆಗೊಳಿಸಿದರು. ಆತ್ಮವು ಬಿಟ್ಟುಹೋಯಿತು. ಅವರು ಅದನ್ನು ನಂಬದಿದ್ದರೂ, ಆತನು ಬಿಟ್ಟು ಹೋದನು. ಆ ಮದುವೆಯು ಮರಣವನ್ನು ತಂದಿತು, ಮತ್ತು ದೇವರ ಏಕತ್ವದ ಬೆಳಕು (ಪ್ರಕಟಣೆ) ಬಂತು. ಅವರು ಸಹಾ ಸಂಸ್ಥಾಪಿಸಿ ಸತ್ತುಹೋದರು. ಮತ್ತು ಆಮೇಲೆ 1933 ರಲ್ಲಿ ಒಹೈಯೋ ನದಿಯಮೇಲೆ ದೇವರು ಆ ಬೆಂಕಿ (ಪವಿತ್ರಾತ್ಮನ) ಬಿತ್ತು, ಗುಣಪಡಿಸುವ ಭಕ್ತಿ ಸಂಜೀವನ ಪ್ರಪಂಚವನ್ನೆಲ್ಲಾ ಸುತ್ತಿತು, ಆದರೆ ಅದು ಯಾವದೇ ಒಂದು ಸಂಸ್ಥಾಪನೆಯ ಮೂಲಕ ಎಂದೂ ಬರಲಿಲ್ಲ. ದೇವರು ಆ ಪೆಂಟಾಕೋಸ್ಟ್ ಗುಂಪಿನಿಂದ ಹೊರಗೆ ಹೋದನು, ಸಂಸ್ಥೆಯ ಹೊರಗೆ ಹೋದನು, ಮತ್ತು ಮುಂದಕ್ಕೆ ಸಹ ಆತನು ಏನುಮಾಡುವನೆಂದರೆ, ಆ ಸಂಸ್ಥೆಯ ಹೊರಗೆಯೇ ಇರುವನು, ದೇವರು ಸತ್ತ ವಿಷಯದಿಂದ ಕೆಲಸ ಮಾಡಲಾರನು. ಆತನು ಕೇವಲ ಜೀವಿಸುತ್ತಿರುವ ಸದಸ್ಯರಿಂದ ಕೆಲಸ ಮಾಡಶಕ್ತನು. ಆ ಜೀವಿಸುತ್ತಿರುವ ಸದಸ್ಯರು ಬಾಬೇಲಿನಿಂದ ಹೊರಗಿರುವರು.

28. ಆದುದರಿಂದ ನೀವು ನೋಡಿರಿ, ''ಮರಣ'' ಅಥವಾ ''ಸಂಸ್ಥೆ'' ಬಂತು, ಮತ್ತು ಸಭೆಯು ಸತ್ತಿತು, ಅಥವಾ ಅದನ್ನು ಸರಳವಾಗಿ ಮಾಡಲು ಮರಣ ಬಂದು ಅಲ್ಲಿ ನೆಲೆಗೊಂಡಿತು, ಆದರೆ ಸ್ವಲ್ಪವೇ ಮೊದಲು ಅಲ್ಲಿ ಜೀವವು ರಾಜ್ಯವಾಳುತಿತ್ತು. ಮೂಲ ಮಾತೆಯಾದ ಹವ್ವಳು ಮಾನವ ಕುಲಕ್ಕೆ ಮರಣವನ್ನು ತಂದಂತೆ ಈಗ ಈ ಸಂಸ್ಥೆಯು ಮರಣವನ್ನು ತಂದಿತು, ಯಾಕಂದರೆ ಸಂಸ್ಥೆಯು ಎರಡುಪಾಲಷ್ಟು ಭ್ರಷ್ಟರಾದವರ ಒಂದು ಉತ್ಪನ್ನವಾಗಿದೆ; ನಿಕೋಲಾಯಿತರ ಮತ್ತು ಬಿಳಾಮನ ಮಾರ್ಗದಲ್ಲಿ ನಡೆಯುವವರ, ಪ್ರವಾದಿನಿಯಾದ ಇಜೆಬೇಲಳಿಂದ ಪ್ರಸಿದ್ಧಪಡಿಸಲ್ಪಟ್ಟಂತ ಒಂದು ವಿಷಯ ವಾಗಿದೆ. ಈಗ ಅವರ ದುಷ್ಟಕೃತ್ಯಕ್ಕಾಗಿ ಹವ್ವಳು ಆ ಸರ್ಪದೊಂದಿಗೆ

(ಪವಿತ್ರಾತ್ಮ) ಆದರೆ ಬೇರೆ ಐದುಮಂದಿಯಲ್ಲಿ ಇರಲಿಲ್ಲ. ಆ ಮಗು ಧ್ವನಿ ಕೊಟ್ಟಾಗ ''ಇಗೋ ಮದಲಿಂಗನು ಬರುತ್ತಾನೆ.'' ಆ ಐದು ಮೂರ್ಖ ಕುವರಿಯರು ಎಣ್ಣೆಯನ್ನು ಹುಡುಕಿಕೊಂಡು ಓಡಿಹೋಗಬೇಕಾಯಿತು, ಅದೇ ಸಮಯದಲ್ಲಿ ಆ ಐದು ಬುದ್ಧಿವಂತರಾದ ಕನ್ಯೆಯರು ಆ ಮದುವೆಯ ಮನೆಗೆ (ಊಟಕ್ಕೆ) ಹೋದರು. ಹೊರಗೆ ಉಳಿದ ಆ ಐದುಮಂದಿ ಆ ಮಹಾ ಸಂಕಟದೊಳಕ್ಕೆ ಬಿಡಲ್ಪಟ್ಟರು. ಒಯ್ಯಲ್ಪಡು ವಿಕೆಯಲ್ಲಿ ಯಾರ್ಯಾರು ಮೇಲೆ ಹೋಗುವದಿಲ್ಲವೋ ಆ ಎಲ್ಲರಿಗೆ ಇದೇ ಸಂಗತಿ ಸಂಭವಿಸುವದು. ಆ ವೇಶ್ಯೆ ಮತ್ತು ಆ ಹೆಣ್ಣು ಮಕ್ಕಳಮೇಲೆಯೂ ಅದೇ ಸಂಗತಿಯು ಸಂಭವಿಸುವದು. ಎರಡನೇದಾಗಿ ಅದು ಹೇಳುತ್ತದೆ, ಆತನು ಅವರನ್ನು ಮರಣದಿಂದ ಕೊಲ್ಲುವನು. ಅಥವಾ ಆ ನಿಜವಾದ ಭಾಷಾಂತರದ (ತರ್ಜುಮೆಯ)ಪ್ರಕಾರ ''ಅವರು ಮರಣದಿಂದ ಮರಣಕ್ಕೆ ಬಿಳಪಡಿಸಲ್ಪಡಲಿ'' ಅದು ಬಹಳ ಒಂದು ವಿಲಕ್ಷಣವಾದ ಮಾತಾಗಿದೆ. ನಾವು ಈ ರೀತಿಯಾಗಿ ಹೇಳಬಹುದು, ''ಒಬ್ಬ ಮನುಷ್ಯನು ನೇತುಹಾಕುವುದರ ಮೂಲಕ ಮರಣ ಶಿಕ್ಷೆ ಹೊಂದಲಿ, ಅಥವಾ ವಿದ್ಯುಚ್ಛಕ್ತಿಯ ಮೂಲಕ, ಅಥವಾ ಇನ್ನು ಬೇರೆ ರೀತಿಯಲ್ಲಿ'' ಆದರೆ ಇದು ಹೇಳುತ್ತದೆ, ''ಅವರು ಮರಣದಿಂದ ಮರಣಕ್ಕೆ ಒಳಪಡಿಸಲ್ಪಡಲಿ.'' ಮರಣವು ತಾನೇ ಅವರ ಮರಣಕ್ಕೆ ಕಾರಣವಾಗಿದೆ. ನೀವು ಈಗ ಇದನ್ನು ಸ್ಪಷ್ಟವಾಗಿ ನೋಡಬೇಕೆಂದು ಬಯಸುತ್ತೇನೆ. ಆದುದರಿದ ನಾನು ಪುನಃ ಇಜಬೇಲಳ ಮಗಳು ಯೆಹೂದ ಮನೆತನದೊಂದಿಗೆ ಮದುವೆಯಾಗುವ, ಮತ್ತು ಅದರಿಂದಾಗಿ ಅದನ್ನು (ಯೆಹೂದ ಮನೆತನ) ನೇರವಾಗಿ ವಿಗ್ರಹಾರಾಧನೆಗೆ ಒಳಪಡಿಸಿ ಮತ್ತು ದೇವರು ಯೆಹೂದ ಕುಲವನ್ನು ಮರಣಕ್ಕೆ ಒಪ್ಪಿಸುವುದಕ್ಕೆ ಕಾರಣವಾಗುವ ಉದಾಹರಣೆಯನ್ನು ತೆಗೆದುಕೊಳ್ಳುತ್ತೇನೆ. ಬಿಳಾಮನು ಸಹ ಇದನ್ನೇ ಮಾಡಿದನು. ಆದುದರಿಂದ ಇಲ್ಲಿ ಇಜೆಬೇಲಳು ಅವಳ ಮೂರ್ತಿ ಪೂಜೆಯ ಮೂಲಕ ಇಲ್ಲಿದ್ದಾಳೆ. ಅಲ್ಲಿ ಯೆಹೂದವು ಸತ್ಯರೀತಿಯಲ್ಲಿ ದೇವರನ್ನು ಆರಾಧಿಸುತ್ತಾ, ದೇವರ ವಾಕ್ಯದ ಅನುಸಾರವಾಗಿ ಜೀವಿಸುತ್ತಿದೆ. ಹೀಗಿರುವಾಗ ಇಜೆಬೇಲಳು ತನ್ನ ಮಗಳನ್ನು ಯೆಹೋರಾಮನಿಗೆ ಮದುವೆ ಮಾಡಿಸಿಕೊಡುತ್ತಾಳೆ. ಅದು ಸಂಭವಿಸಿದ ಕೂಡಲೇ ಯೆಹೋರಾಮನು ಜನರು ಪೂರ್ತಿ ಪೂಜತರಾಗಲು



ನಂಬುವದಿಲ್ಲ. ಇಲ್ಲಯ್ಯಾ. ಅವರು ಹಾಗೇನಾದರೂ ಮಾಡಿದರೆ, ಪಶ್ಚಾತ್ತಾಪ ಪಟ್ಟು ಹಿಂದೆ ಹೋಗಬೇಕು. ಆದರೆ ದೇವರು ಆತನ ಸಭೆಯಲ್ಲಿ ಇದ್ದಾನೆಂದು ಅವರು ಹೇಳುತ್ತಾರೆ. ಅದು ಬೈಬಲನ್ನು ಕೆಥೋಲಿಕ್ ಸಭೆಯ ಚರಿತ್ರೆಯನ್ನಾಗಿ ಮಾಡುತ್ತದೆ. ಅದು ಆ ರೀತಿ ಇಲ್ಲ. ಅವರು ಕೇವಲ ನೀರಿನ ದೀಕ್ಷಾಸ್ನಾನಕ್ಕೆ ಏನುಮಾಡಿದ್ದಾರೆಂದು ನೋಡಿರಿ. ಅದನ್ನು ಅವರು ಆ ಕ್ರೈಸ್ತ ದೀಕ್ಷಾಸ್ನಾನವಾಗಿರುವಂಥದ್ದನ್ನು ತೆಗೆದು ಅದನ್ನು ಆ ವಿಗ್ರಹಾರಾಧಕರ, ಹೆಸರು ಗಳಲ್ಲಿ ಮಾಡುವಂಥ ದೀಕ್ಷಾಸ್ನಾನವನ್ನಾಗಿ ಮಾಡಿದರು. ನಾನು ಒಬ್ಬ ಕೆಥೋಲಿಕ್ ಪಾದ್ರಿಯೊಂದಿಗೆ ಹೊಂದಿದಂಥ ಒಂದು ಅನುಭವವನ್ನು ನಿಮಗೆ ಹೇಳುವೆನು. ಒಂದುಸಾರೆ ನಾನು ದೀಕ್ಷಾಸ್ನಾನ ಮಾಡಿದ ಒಬ್ಬ ಹುಡುಗಿಯು ಕೆಥೋಲಿಕ್ ಮತಕ್ಕೆ ಹಿಂತಿರುಗಿದಳು, ಆದುದರಿಂದ ಆ ಪಾದ್ರಿಯು ಅವಳ ವಿಷಯವಾಗಿ ನನ್ನೊಡನೆ ಮಾತನಾಡಲು ಇಚ್ಛಿಸುತ್ತಿದ್ದನು. ಅವಳು ಯಾವರೀತಿಯ ದೀಕ್ಷಾಸ್ನಾನವನ್ನು ಹೊಂದಿದಳು ಎಂದು ಅವನು ನನ್ನೊಡನೆ ಕೇಳಿದನು. ನನಗೆ ತಿಳಿದಷ್ಟರ ಮಟ್ಟಿಗೆ ಅಲ್ಲಿರುವ ಒಂದೇ ಒಂದು ರೀತಿಯ ಕ್ರೈಸ್ತ ದೀಕ್ಷಾಸ್ನಾನವನ್ನು ಅವಳಿಗೆ ಕೊಟ್ಟೆನೆಂದು ನಾನು ಅವನೊಡನೆ ಹೇಳಿದೆನು. ನಾನು ಅವಳನ್ನು ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನೀರಿನಲ್ಲಿ ಹೂಣಿಟ್ಟಿದ್ದೆನು. ಒಂದು ಸಮಯದಲ್ಲಿ ಕೆಥೋಲಿಕ್ ಸಭೆಯು ಹಾಗೆ ಮಾಡುತ್ತಿತ್ತೆಂದು ಆಪಾದ್ರಿಯು ನನ್ನೊಡನೆ ಹೇಳಿದನು. ಕೂಡಲೇ ಕೆಥೊಲಿಕ್ ಸಭೆಯು ಯಾವಾಗ ಹಾಗೆ ಮಾಡಿತ್ತೆಂದು ಅವನೊಡನೆ ಕೇಳಿದನು. ಯಾಕೆಂದರೆ ನಾನು ಅವರ ಚರಿತ್ರೆಯನ್ನು ಓದಿದ್ದೆನು. ಮತ್ತು ಅವನು ಹೇಳಿದ್ದನ್ನು ನಾನು ಅಲ್ಲಿ ಕಾಣರಲಿಲ್ಲ. ಅದು ಬೈಬಲಿನಲ್ಲಿ ಬರೆಯಲ್ಪಟ್ಟಿದೆ, ಮತ್ತು ಯೇಸುವು ಕೆಥೋಲಿಕ್ ಸಭೆಯನ್ನು ಸಂಸ್ಥಾಪಿಸಿದ್ದಾನೆ ಎಂದು ಅವನು ನನಗೆ ಹೇಳಿದನು. ಪೇತ್ರನು ನಿಜವಾಗಿಯು ಮೊದಲನೆಯ ಪೋಪನು ಆಗಿದ್ದನು. ಎಂದು ನೆನಸುತ್ತಿಯೋ ಎಂದು ನಾನು ಅವನನ್ನು ಕೇಳಿದೆನು. ಪೇತ್ರನು ಆಗಿದ್ದನು ಎಂದು ಅವನು ನಿಶ್ಚಯಪೂರ್ವಕವಾಗಿ ಹೆಳಿದನು. ಮತ್ತು ನಿಮ್ಮ ಪ್ರಾರ್ಥನೆಗಳು, ಅದು ಸಂಪೂರ್ಣವಾಗಿ ಸರಿಯಾಗಿವೆ ಮತ್ತು ಎಂದಿಗೂ ಬದಲಾಗಲಾರವು ಎಂದು ನಿಶ್ಚಯಪಡಿಸುವದಕ್ಕೋಸ್ಕರ ಅವುಗಳು ಲ್ಯಾತೀನ್ ಭಾಷೆಯಲ್ಲಿ ಹೇಳಲ್ಪಡುತ್ತವೋ

ಎಂದು ಕೇಳಿದೆನು. ಅದು ಸತ್ಯವೆಂದು ಅವನು ಹೇಳಿದನು. ಅವರು ಅವರಲ್ಲಿ ಮೊದಲು ಇದ್ದ ಸಂಗತಿಗಳಿಂದ ಬಹಳದೂರ ಅಲೆದಿದ್ದಾರೆ. ಎಂದು ನಾನು ನೆನಸುತ್ತೇನೆ ಎಂದು ಅವನೊಡನೆ ಹೇಳಿದೆನು. ಕೆಥೋಲಿಕ್ ಸಭೆಯು ನಿಜವಾಗಿ ಅಪೋಸ್ತಲರ ಕೃತ್ಯಗಳ ಪಸ್ತಕದಲ್ಲಿ ವಿಶ್ವಾಸವಿಡುವದಾದರೆ, ಆಗ ನಾನು ಒಬ್ಬ ಹಳೆಯ ಕಾಲದ ಕೆಥೋಲಿಕನೇ ಆಗಿದ್ದೆನೆ ಎಂದು ನಾನು ಅವನಿಗೆ ಹೇಳಿದೆನು. ಸತ್ಯವೇದವು ಒಂದು ಕೆಥೋಲಿಕ್ ಸಭೆಯ ದಾಖಲೆ ಯಾಗಿದೆ ಮತ್ತು ದೇವರು ಸಭೆಯಲ್ಲಿ ಇದ್ದಾನೆ ಎಂದು ಅವನು ನನಗೆ ಹೇಳಿದನು. ನಾನು ಅವನೊಡನೆ ಒಪ್ಪಲಿಲ್ಲ, ಯಾಕೆಂದರೆ ದೇವರು ತನ್ನ ವಾಕ್ಯದಲ್ಲಿ ಇದ್ದಾನೆ. ಪ್ರತೀಯೊಬ್ಬ ಮನುಷ್ಯನು ಸುಳ್ಳುಗಾರನಾಗಿದ್ದರೂ ದೇವರು ಸತ್ಯವಾಗಿದ್ದಾನೆ. ನೀನು ಆ ಪುಸ್ತಕದಿಂದ ಏನನ್ನಾದರೂ ತೆಗೆದರೆ ಅಥವಾ ಅದಕ್ಕೆ ಏನನ್ನಾದರೂ ಸೇರಿಸಿದರೆ, ದೇವರು ಅವರಿಗೆ, ಸೇರಿಸುವವರಿಗೆ ಉಪದ್ರವಗಳನ್ನು ತಂದು ಹಾಕುವನು, ಮತ್ತು ಅದರಿಂದ ಏನಾದರೂ ತೆಗೆದರೆ, ಪರಿಶುದ್ಧ ಪಟ್ಟಣದಲ್ಲಿಯೂ, ಜೀವ ವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ತೆಗೆದುಬಿಡುವನು. ಪ್ರಕಟಣೆ 22: 18, 19.

19. ದೇವರು ವಚನದ ಬದಲು ಸಭೆಯಲ್ಲಿ ಇದ್ದಾನೆ ಎಂದು ರೋಮನ್ ಕೆಥೋಲಿಕ್ ಸಭೆ ಹೇಗೆ ವಿಶ್ವಾಸವಿಡುತ್ತದೆ ಎಂದು ನಾನು ನಿಮಗೆ ತೋರಿಸುವೆನು, 23 ರನೇ ಪೋಪ ಜೋನ್‌ನ ದಿನಚರಿಯಿಂದ ತೆಗೆದ ಒಂದು ಭಾಗವು ಇಲ್ಲಿದೆ, ''ಈ ಮೂರು ವರುಷಗಳಲ್ಲಿ ಪೋಪನಾಗಿ ನನ್ನ ಅನುಭವವೇನೆಂದರೆ, ಈ ಸೇವೆಯನ್ನು ನಾನು ''ಭಯದಿಂದಲೂ ನಡುಗುತ್ತಲೂ'' ಕರ್ತನ ಚಿತ್ತಕ್ಕೆ ಪೂರ್ಣ ವಿಧೇಯತ್ವದಿಂದ ಸ್ವೀಕರಿಸಿದ ಕಾರಣದಿಂದ, ಮತ್ತು ಇದು ನನಗೆ ಕ್ರೈಸ್ತಗುರು ಸಮಾಜದ ಪ್ರಧಾನ ಗುರುಗಳ ಪವಿತ್ರ ವಿಶ್ವವಿದ್ಯಾನಿಲಯದ ಮೂಲಕ ಕೊಡಲ್ಪಟ್ಟು, ಈ ನೀತಿಯ ನಿಯಮಕ್ಕೆ ಸಾಕ್ಷಿಯನ್ನು ಕೊಡುತ್ತದೆ ಮತ್ತು ಅದಕ್ಕೆ ನಂಬಿಗಸ್ತನಾಗಿರಲು ಇದು ಒಂದು ಮನಕರಗಿಸುವ ಮತ್ತು ಸಿದ್ದವಾಗಿರುವ ಕಾರಣವಾಗಿದೆ; ದೇವರಲ್ಲಿ ಸಂಪೂರ್ಣ ವಿಶ್ವಾಸ ಇಂದಿನ ದಿನಕ್ಕೆ ಸಂಬಂಧಪಟ್ಟ ಎಲ್ಲಾ ಸಂಗತಿಗಳಲ್ಲಿ ಮತ್ತು ಭವಿಷ್ಯದಲ್ಲಿ ಸಂಪೂರ್ಣ ಶಾಂತಿ.'' ಈ ಪೋಪನು ಹೇಳುತ್ತಾನೆಂದರೆ ದೇವರು ಸಭೆಯು ಮೂಲಕ ಮಾತನಾಡಿ ಆತನ ಚಿತ್ತವನ್ನು



ಅವನು ದೇವರಲ್ಲಿ ಭಯಭಕ್ತಿಯುಳ್ಳ ಮತ್ತು ದೇವರನ್ನು ಆರಾಧಿಸುವ ಯೆಹೂದ ಜನರನ್ನು ವಿಗ್ರಹಾರಾಧನೆಗಳಿಗೆ ಬಳಪಡಿಸಿದನು. ಅದುವೇ ನಿಜವಾಗಿ ಈ ಎಲ್ಲಾ ಹೆಣ್ಣು ಮಕ್ಕಳೆನಿಸಿಕೊಳ್ಳುವ ಸಭೆಗಳು ಮಾಡಿದ ವಿಷಯವಾಗಿದೆ, ಇದನ್ನು ನಾನು ನಿಮಗೆ ತೋರಿಸಿ ಹೇಳಿದ್ದೇನೆ. ಅವರು ಸತ್ಯದಲ್ಲಿ ಪ್ರಾರಂಭಮಾಡುತ್ತಾರೆ, ಮತ್ತು ಸಂಸ್ಥೆಯೊಂದಿಗೆ ವಿವಾಹವಾಗುತ್ತಾರೆ, ಮತ್ತು ನೇಮನಿಷ್ಠೆಗಳಿಗೋಸ್ಕರ ವಿಶ್ವಾಸ ಪ್ರಮಾಣಕ್ಕೋಸ್ಕರ ವಾಕ್ಯವನ್ನು ಬಿಟ್ಟುಬಿಡುತ್ತಾರೆ. ಈಗ ನನಗೆ ಇದನ್ನು ಹೇಳಲು ಬಿಡಿರಿ. ಇಬ್ರಿಯ 13:7 ರಲ್ಲಿ ಹೀಗೆ ಹೇಳುತ್ತದೆ, ''ನಿಮಗೆ ದೇವರ ವಾಕ್ಯವನ್ನು ತಿಳಿಸಿದ ನಿಮ್ಮ ಸಭಾನಾಯಕರನ್ನು ಜ್ಞಾಪಕಮಾಡಿಕೊಳ್ಳಿರಿ; ಅವರು ಯಾವ ರೀತಿಯಿಂದ ನಡೆದುಕೊಂಡು ಪ್ರಾಣಬಿಟ್ಟರೆಂಬುದನ್ನು ಆಲೋಚಿಸಿರಿ. ಅವರ ನಂಬಿಕೆಯನ್ನು ಅನುಸರಿಸಿರಿ.'' ನಮ್ಮನ್ನು ಆ ವಾಕ್ಯವೇ ಆಳುತ್ತದೆ. ಮನುಷ್ಯರಲ್ಲಿ ಈಗ ಒಬ್ಬ ಮನುಷ್ಯನು ಗಂಡನಾಗಿದ್ದು ಸ್ತ್ರೀಯ ತಲೆಯಾಗಿದ್ದಾನೆ (ಶಿರಸ್ಸಾಗಿದ್ದಾನೆ) ಅವನು ಅವಳನ್ನು ಆಳುತ್ತಾನೆ. ಆದರೆ ಸಭೆಯು ಕೂಡಾ ಒಂದು ಸ್ತ್ರೀಯಾಗಿದೆ, ಮತ್ತು ಅದರ ಯಜಮಾನನು ವಾಕ್ಯವಾಗಿದೆ, ಯೇಸುವು ವಾಕ್ಯವಾಗಿದ್ದಾನೆ. ಅವಳು ವಾಕ್ಯವನ್ನು ನಿರಾಕರಿಸಿ, ಬೇರೆ ಯಾವದಾದರು ಶಿರಸ್ಸನ್ನು ಸ್ವೀಕರಿಸಿದರೆ, ಅವಳೊಬ್ಬ ವ್ಯಭಿಚಾರಿಣಿಯಾಗಿದ್ದಾಳೆ. ಈಗ ನೇಮ ನಿಷ್ಠೆಗಳಿಗೋಸ್ಕರ, ಸಂಪ್ರದಾಯಕೋಸ್ಕರ ವಾಕ್ಯವನ್ನು ಬಿಟ್ಟುಬಿಡದಿರುವ ಒಂದೇ ಒಂದು ಸಭೆಯನ್ನು ನನಗೆ ತೋರಿಸಿರಿ. ಅವರೆಲ್ಲರೂ ವ್ಯಭಿಚಾರಿಣಿಯರಾಗಿದ್ದಾರೆ - ತಾಯಿಯಂತೆ, ಮಗಳು.

27. ವೇಶ್ಯೆ ಮತ್ತು ಅವಳ ಮಕ್ಕಳಿಗಿರುವ ಶಿಕ್ಷೆ ಏನಾಗುವದು? ಸರಿ, ಅದು ಎರಡು ಭಾಗಳಲ್ಲಿರುವದು. ಮೊದಲನೇದಾಗಿ ಆತನು ಹೇಳಿದ್ದು, ''ನಾನು ಅವಳನ್ನು ಹಾಸಿಗೆಯಮೇಲೆ ಬಿದ್ದುಕೊಂಡಿರುವಂತೆ ಮಾಡುವೆನು.'' 22 ನೆಯ ವಚನದ ಕಡೇಭಾಗದ ಪ್ರಕಾರ ಅದು ಒಂದು ಸಂಕಟದ ಹಾಸಿಗೆಯಾಗಿರುವದು, ಅಥವಾ ಮಹಾ ಸಂಕಟವಾಗಿರುವದು. ಅದುವೇ ಯೇಸುವು ಮತ್ತಾಯ 25:1–13 ರಲ್ಲಿ ಹೇಳಿದಂಥ ಸರಿಯಾದ ವಿಷಯವಾಗಿದೆ. ಅಲ್ಲಿ ಹತ್ತು ಕುವರಿಯರಿದ್ದರು, ಐದುಮಂದಿ ಬುದ್ಧಿವಂತೆಯರಾಗಿದ್ದರು, ಮತ್ತು ಐದು ಮಂದಿ ಮೂರ್ಖರಾಗಿದ್ದರು, ಬುದ್ಧಿವಂತರಾದ ಐದುಮಂದಿಯಲ್ಲಿ ಎಣ್ಣೆಯಿತ್ತು

ಮಕ್ಕಳು ಹುಟ್ಟಿದರೆ, ಆಗ ಅವಳು ದೇವರ ವಾಕ್ಯವು ಹೇಳಿದಂತೆ ಬೆಂಕಿಯಿಂದ ಸುಟ್ಟುಬಿಡಲ್ಪಡಲೇಬೇಕು ಅದು ನಿಜವಾಗಿ ಸತ್ಯವಾಗಿದೆ. ಅದು ಅವಳ ಅಂತ್ಯವಾಗಿದೆ, ಯಾಕಂದರೆ ಅವಳು ಬೆಂಕಿಯಿಂದ ಸುಡಲ್ಪಡುವಳು. ಅವಳ ಅಂತ್ಯವು ಬೆಂಕಿಯ ಕೆರೆಯೇ. ಆದರೆ ಕೆಲವು ಕ್ಷಣಕ್ಕಾಗಿ ಸ್ವಲ್ಪ ತಡೆದು ಈ ಮಕ್ಕಳ ವಿಷಯವಾಗಿ ಆಲೋಚಿಸಿರಿ. ಮಕ್ಕಳು ಒಬ್ಬ ಹೆಂಗಸಿನ ಮೂಲಕವಾಗಿ ಹುಟ್ಟುತ್ತಾರೆಂದು ನಮಗೆ ತಿಳಿದದೆ. ಆ ಹೆಂಗಸಿಗೆ ಅವಳ ಹೊಟ್ಟೆಯಿಂದ ಹುಟ್ಟಿದ ಮಕ್ಕಳು ಇದ್ದಾರೆಂಬುದು ಸ್ಪಷ್ಟವಾಗಿದೆ, ಆದರೆ ಅವರು ಅವಳು ಮಾಡಿದ ಸಂಗತಿಗಳನ್ನೇ ಮಾಡಿದರು. ಒಂದು ಸಂಸ್ಥೆಯಿಂದ ಎಂದಾದರೂ ಹೊರಬಂದು ಪುನಃ ನೇರವಾಗಿ ಅದಕ್ಕೆ ಹಿಂದೆ ಹೋಗದ ಒಂದೇ ಒಂದು ಸಭೆಯನ್ನು ನನಗೆ ತೋರಿಸಿರಿ. ಅಲ್ಲಿ ಒಂದೂ ಇಲ್ಲ. ಲೂಥರನ್ ನವರು ಅಲ್ಲಿಂದೆ ಹೊರಬಂದು ಪುನಃ ಸಂಸ್ಥಾಪಿಸಿ ಅದಕ್ಕೆ ಹಿಂದೆ ಹೋದರು ಮತ್ತು ಈ ದಿನದಲ್ಲಿ ಆ ಎಕ್ಯೂಮೆನಿಕಲ್ ಚಳವಳದೊಂದಗೆ ಒಂದಾಗಿದ್ದಾರೆ. ಮೆಥೋಡಿಸ್ಟರು ಹೊರಬಂದು ಪುನಃ ಹಿಂದೆ ಆದನ್ನು ಸಂಸ್ಥಾಪಿಸಿದರು. ಪೆಂಟೆಕೋಸ್ಟ್‌ನವರು ಹೊರಬಂದು ಮತ್ತು ಅವರೂ ಸಹ ಪುನಃ.ಹಿಂದೆ ಸಂಸ್ಥಾಪಿಸಿದರು. ಅಲ್ಲಿ ಇನ್ನೊಂದು ಹೊರ ಬರುವಿಕೆ ಇರುವದು, ಮತ್ತು ದೇವರಿಗೆ ಸ್ತೋತ್ರವಾಗಲಿ, ಅವರು ಪುನಃ ಹಿಂದೆ ಸಂಸ್ಥಾಪಿಸುವದಿಲ್ಲ ಯಾಕಂದರೆ ಅವರಿಗೆ ಸತ್ಯ ತಿಳಿದದೆ. ಆ ಗುಂಪು ಈ ಕಡೇ ದಿನದ ಮದಲಗಿತ್ತಿಯಾಗಿರುವದು.

26. ಈಗ ಇಲ್ಲಿ ಆ ವೇಶ್ಯೆಗೆ ಮಕ್ಕಳಿದ್ದರು ಎಂದು ಇಲ್ಲಿ ಹೇಳುತ್ತದೆ. ಈಗ ಅವರು ಏನಾಗಿದ್ದರೂ? ಅವರು ಅವಳ ಹೆಣ್ಣುಮಕ್ಕಳಾಗಿದ್ದರು, ಯಾಕಂದರೆ ಅವರು ಅವಳಂತೆಯೇ ಇರುವ ಸಭೆಗಳಾಗಿದ್ದರು. ಈಗ ಇಲ್ಲಿ ಒಂದು ಬಹಳ ಕುತೂಹಲಕಾರಕವಾದ ಒಂದು ವಿಷಯವಿದೆ. ಆ ಮಗಳು ಯೆಹೋರಾಪಾಟನ ಮಗನಾದ ಯೆಹೋರಾಮನನ್ನು ಮದುವೆಯಾದಳು, ಮತ್ತು 2 ನೇ ಅರಸುಗಳು 8:16 ರಲ್ಲಿ ಅದು ಹೀಗೆ ಹೇಳುತ್ತದೆ, "ಯೆಹೋರಾಮನು ತನ್ನ ಮಾವನು (ಆಹಾಬನು)ನಡೆದುಕೊಂಡಂತೆ (ದುಷ್ಟನಾಗಿ) ನಡೆದುಕೊಂಡನು." ಈ ಮದುವೆಯ ಮೂಲಕವಾಗಿ ಅವನು ನೇರವಾಗಿ ವಿಗ್ರಹಾರಾಧನೆಗೆ ಹೋದನು.



ಪ್ರಕಟಿಸಿದನು. ಅವನು ಮತ್ತೂ ಹೇಳಿದ್ದೇನೆಂದರೆ ಅವನು ಮನುಷ್ಯರ ಮಾತಿನಲ್ಲಿ ಸಂಪೂರ್ಣ ವಿಶ್ವಾಸವಿಡುತ್ತಾನೆ ಮತ್ತು ಅದರಿಂದಾಗಿ ಶಾಂತಿಯಿಂದ, ಆದಕ್ಕೆ ವಿಧೇಯನಾಗಿದ್ದಾನೆ. ಅದು ಅಷ್ಟು ಸುಂದರವಾಗಿ ಕೇಳಿಸುತ್ತದೆ. ಆದರೆ ಅದು ಅಷ್ಟೇ ಸುಳ್ಳಾಗಿರುತ್ತದೆ. ಏದೆನ್ ತೋಟದಲ್ಲಿ ಇದ್ದ ಕೆಟ್ಟತನದಂತೆ.

20. ಈಗ ಇಲ್ಲಿ ಪ್ರಕಟಣೆ 17ನೇ ಅಧ್ಯಾಯಕ್ಕೆ ಹೋಗಿ ಆ ಹೆಂಗಸನ್ನು ನೋಡೋಣ. ಆ ಸಭೆ, ಅವಳು ಸುಳ್ಳು ಪ್ರವಾದನೆಯಲ್ಲಿ ಜೀವಿಸುತ್ತಿದ್ದಾಳೆ, ಆದರೆ ದೇವರ ವಾಕ್ಯದಲ್ಲಿ ಅಲ್ಲ. 1 ನೇ ವಚನದಲ್ಲಿ, ದೇವರು ಅವಳನ್ನು ಮಹಾ ಜಾರಸ್ತ್ರೀಯೆಂದು ಕರೆಯುತ್ತಾನೆ. ಅವಳು ಯಾಕೆ ಜಾರಸ್ತ್ರೀಯಾಗಿದ್ದಾಳೆ? ಯಾಕೆಂದರೆ ಅವಳು ವಿಗ್ರಹಾರಾಧನೆಯಲ್ಲಿದ್ದಾಳೆ. ಅವಳು ಜನರನ್ನು ಅದೇ ಮಾರ್ಗದಲ್ಲಿ ನಡೆಯಿಸುತ್ತಾಳೆ. ವಿಗ್ರಹಾರಾಧನೆಗೆ ಪರಿಹಾರವೇನು? ದೇವರ ವಾಕ್ಯವೇ. ಈ ಹೆಂಗಸು ದೇವರ ವಾಕ್ಯವನ್ನು ಬಿಟ್ಟು ಬಿಟ್ಟದ್ದರಿಂದ ಅವಳು ಒಬ್ಬ ಜಾರಸ್ತ್ರೀಯಾಗಿದ್ದಾಳೆ. ಅಲ್ಲಿ ಅವಳು ಬಹಳ ನೀರುಗಳ ಮೇಲೆ ವಾಸಿಸುತ್ತಾಳೆ. ಅಂದರೆ ಬಹಳ ಜನರ ಮಧ್ಯದಲ್ಲಿ "ಇದು ನಿಜವಾಗಿಯೂ ಸುಳ್ಳುಸಭೆ ಆಗಿರಲೇ ಬೇಕು ಏಕೆಂದರೆ, ದೇವರ ಸಭೆಯು (ಯಾವಾಗಲೂ) ಚಿಕ್ಕದಾಗಿರುತ್ತದೆ. ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ.

21. ದೇವರ ದೃಷ್ಟಿಯಲ್ಲಿ ಅವಳು ಏನಾಗಿದ್ದಾಳೆಂದು ಲಕ್ಷಕ್ಕೆ ತನ್ನಿರಿ. ಅವಳು ಜನರಿಗೆ ಎಷ್ಟೇ ಅದ್ಭುತಳಾಗಿ ಕಾಣಬಹುದು. ಅವಳು ಎಷ್ಟೇ ವಿದ್ವಾಂಸಳಂತೆ ಕೇಳಿಸಬಹುದು, ಅದರಿಂದ ಏನೂ ಪ್ರಯೋಜನವಿಲ್ಲ, ಅವಳು ತನ್ನ ಜಾರತ್ವ ಸಂಬಂಧವಾದ ಸಂಗತಿಗಳಿಂದ ಕುಡಿಯಲ್ಪಟ್ಟು ಅಶುದ್ಧಳಾಗಿದ್ದಾಳೆ. ಈಗ ಅವಳು ರಕ್ತಸಾಕ್ಷಿಗಳು ರಕ್ತವನ್ನು ಕುಡಿದು ಮತ್ತಳಾಗಿದ್ದಾಳೆ. ಪ್ರವಾದಿಗಳನ್ನೂ ಮತ್ತು ಯಾಜಕರನ್ನೂ ಕೊಂದು ಹಾಕಿದ ಬಾಳ್ ದೇವತೆಗೆ ಅಡ್ಡ ಬಿದ್ದು ಪೂಜಿಸದೆ ಇದ್ದ ದೇವ ಜನರನ್ನು ನಾಶಮಾಡಿದ ಇಜಬೇಲಳಂತೆಯೇ. ಇದುವೇ ಸರಿಯಾಗಿ ಕೆಥೋಲಿಕ್ ಸಭೆ ಮಾಡಿದ ಸಂಗತಿ. ಪೋಪ ಸಾಹೇಬನ (ಪಾಪ ಸಾಹೇಬನ - ಸಂ) ರಾಜ್ಯಕ್ಕೆ ಮಣಿಯದ ಜನರು ಅವರು ಕೊಂದು ಹಾಕಿದರು. ಮನುಷ್ಯರ ವಚನಕ್ಕೆ ಬದಲಾಗಿ ದೇವರ ವಾಕ್ಯವನ್ನು ಆಶಿಸಿದವರು

ಮರಣಕ್ಕೆ ಒಳಗಾದರು. ಸಾಮಾನ್ಯವಾಗಿ ಬಹಳ ಕ್ರೂರ ರೀತಿಗಳಿಂದ. ಆದರೆ ಈ ರೀತಿಯಾಗಿ ಮರಣದೊಂದಿಗೆ ಆಟವಾಡಿದ ಈ ಸಭೆ ತಾನಾಗಿಯೇ ಸತ್ತು ಹೋಗಿತ್ತು (ಆತ್ಮೀಯ ರೀತಿಯಲ್ಲಿ) ಆದರೆ ಅದನ್ನು ತಾನು ತಿಳಿದಿರಲಿಲ್ಲ. ಅವಳಲ್ಲಿ ಯಾವ ಜೀವವೂ ಇರಲಿಲ್ಲ ಮತ್ತು ಅವಳ ಹಿಂದೆ ಯಾವ ಚಿಹ್ನೆಗಳು ಇರಲಿಲ್ಲ.

## "ಮಾನಸಾಂತರಕ್ಕೆ ಕೊಟ್ಟಂಥ (ಸಮಯ) ಸಂಧರ್ಭ"
## (Space to Repent)

22. ಪ್ರಕಟಣೆ 2:21 "ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ನಾನು ಅವಳಿಗೆ ಸಮಯವನ್ನು ಕೊಟ್ಟೆನು; ಆದರೆ ದೇವರ ಕಡೆಗೆ ತಿರುಗಿಕೊಂಡು ತನ್ನ ಜಾರತ್ವವನ್ನು ಬಿಟ್ಟುಬಿಡುವದಕ್ಕೆ ಅವಳಿಗೆ ಇಷ್ಟವಿಲ್ಲ." ಈ ಸಭೆಯು ನಿಜವಾಗಿ ಆಹಾಬನಿಗಿಂತಲೂ ಹೆಚ್ಚಾಗಿ ಕೆಟ್ಟದ್ದಾಗಿದೆಯೆಂದು ನಿಮಗೆ ತಿಳಿದದೆಯೋ? ಅವನು ಸ್ವಲ್ಪ ಸಮಯಕ್ಕಾಗಿ ಪಶ್ಚಾತ್ತಾಪ ಪಟ್ಟು ದೇವರ ಮುಂದೆ ದೀನ ಮನಸ್ಸಿನಿಂದ ನಡೆದುಕೊಂಡನೆಂದು ನಿಮಗೆ ತಿಳಿದದೆಯೋ? ರೋಮನ್ ಕೆಥೋಲಿಕ್ ಸಭೆಯ ವಿಷಯ ನೀನು ಅದನ್ನು ಹೇಳಲಾರಿ, ಇಲ್ಲಯ್ಯಾ. ಅವಳು ಎಂದೂ ಪಶ್ಚಾತ್ತಾಪ ಪಡಲಿಲ್ಲ. ಆದರೆ ಅವಳು ಪಶ್ಚಾತ್ತಾಪ ಪಡಲು ಸಹಾಯ ಮಾಡಿದ ಯಾರೇ ಆಗಲಿ ಅವರೆಲ್ಲರನ್ನೂ ಅವಳು ಹಟಮಾರಿತನದಿಂದ ನಾಶಮಾಡಿದಳು. ಅದು ಚರಿತ್ರೆಯಾಗಿದೆ. ಈಗ ದೇವರು ಪ್ರತೀ ಯುಗದಲ್ಲಿ ಕೇವಲ (ಸಂದೇಶಗಾರರನ್ನು) ದೂತರನ್ನು ಎಬ್ಬಿಸುತ್ತಿದ್ದದ್ದು ಮಾತ್ರವಲ್ಲ ಆದರೆ ಈ ದೂತರಿಗೆ ಅದ್ಭುತರೀತಿಯ ಸಹಾಯಕರಾಗಿ ಕೆಲವರನ್ನು ಎಬ್ಬಿಸಿದನು. ಆತನು ಪ್ರತೀಯುಗಕ್ಕೆ ಕೆಲವು ಆಶ್ಚರ್ಯಕರವಾದ ದೇವರ ಜನರನ್ನು ಕೊಟ್ಟನು; ಮತ್ತು ಅವರು ಸಭೆಯನ್ನು ಪುನಃ ದೇವರ ಕಡೆಗೆ ತಿರುಗಿಸಲು ತಾವು ಮಾಡ ಶಕ್ತರಾದ ಎಲ್ಲಾ ಸಂಗತಿಗಳನ್ನು ಮಾಡಿದರು. ದೇವರು ಖಂಡಿತವಾಗಿ ಅವಳಿಗೆ ಪಶ್ಚಾತ್ತಾಪ ಪಡಲು ಸಹಾಯವನ್ನು ಮತ್ತು ಸಂದರ್ಭವನ್ನು ಕೊಟ್ಟನು. ಅವಳು ಎಂದೂ ತಶ್ಚಾತ್ತಾಪ ಪಟ್ಟಳೋ? ಮತ್ತು ಅವಳು ಹಾಗೆ ಮಾಡಿದಳೆಂದು ತನ್ನ ಫಲಗಳಿಂದ ತೋರಿಸಿಕೊಟ್ಟಳೋ? ಇಲ್ಲಯ್ಯಾ. ಅವಳು ಎಂದೂ ಹಾಗೆ



ಮಾಡಲಿಲ್ಲ; ಇನ್ನು ಮುಂದೆಯೂ ಹಾಗೆ ಎಂದಿಗೂ ಮಾಡಲಾರಳು. ಅವಳು ಕುಡಿದು ಮತ್ತಳಾಗಿದ್ದಾಳೆ. ಅವಳು ಆತ್ಮೀಕ ವಿಷಯಕ್ಕೆ ತನ್ನ ವಿವೇಚನಾ ಶಕ್ತಿಯನ್ನು ಕಳಕೊಂಡಿದ್ದಾಳೆ.

23. ಈಗ ಗಡಿಬಿಡಿಗೊಳ್ಳಬೇಡಿರಿ. ಮತ್ತು ಅವಳು ಈಗ ಪ್ರೊಟೆಸ್ಟೆಂಟ್ ಸಭೆಯ ವಿಶ್ವಾಸ ಪ್ರಮಾಣದೊಂದಿಗೆ ತನ್ನ ವಿಶ್ವಾಸ ಪ್ರಮಾಣವನ್ನು ಸರಿ ಹೋಲಿಸುವ ಮೂಲಕ ಪ್ರೊಟೆಸ್ಟೆಂಟ್‌ರೊಂದಿಗೆ ಕೂಡಿಕೊಳ್ಳಲು ಪ್ರಯತ್ನ ಮಾಡುವದರಿಂದ, ಈ ರೋಮಿನ ಸಭೆಯು ಸಂತ ಜನರನ್ನು ಕೊಂದ ಪಾಪಕ್ಕೋಸ್ಕರ ಪಶ್ಚಾತ್ತಾಪ ಪಟ್ಟಿದೆ ಎಂದು ಯೋಚಿಸಲು ಪ್ರಾರಂಭಿಸ ಬೇಡಿರಿ. ಅವಳ ಸಾಮೂಹಿಕ ಕೊಲೆಗೋಸ್ಕರ ಅವಳು ಒಂದು ಸಾರೆಯಾದರೂ ಪಶ್ಚಾತ್ತಾಪ ಮಾಡಿದ್ದಾನು ತಪ್ಪುಮಾಡಿದ್ದೇನೆ ಎಂದು ಹೇಳಲಿಲ್ಲ. ಮತ್ತು ಅವಳು ಎಂದೂ ಹಾಗೆ ಮಾಡುವುದಾವುದಿಲ್ಲ ಈ ಒಂದು ಸಮಯದಲ್ಲಿ ಅವಳು ಎಷ್ಟೇ ಮಧುರವಾಗಿಯೂ, ಸವಿಯಾಗಿಯೂ ಕಾಣಿಸಿಕೊಂಡರೂ, ಅವಳು ಹೇಗೂ ಕೊಲ್ಲಲು ಎದ್ದು ಬರುವಳು, ಯಾಕೆಂದರೆ ಅವಳ ಕೆಟ್ಟ ಮತ್ತು ಪಶ್ಚಾತ್ತಾಪವಿಲ್ಲದ ಹೃದಯದಲ್ಲಿ ಕೊಲೆಯು ನೆಲೆಗೊಂಡಿದೆ. "ಆ ವೇಶ್ಯೆಯ ವಿರುದ್ಧವಾದ ಶಿಕ್ಷೆಯ ತೀರ್ಪು ಕೊಡಲ್ಪಟ್ಟಿದೆ."

24. ಪ್ರಕಟಣೆ 2:22-23 "ಇಗೋ, ಅವಳು ಹಾಸಿಗೆಯ ಮೇಲೆ ಬಿದ್ದು ಕೊಂಡಿರುವಂತೆ ಮಾಡುವೆನು, ಮತ್ತು ಅವಳೊಂದಿಗೆ ವ್ಯಭಿಚಾರ ಮಾಡುವವರು ತಮ್ಮ ಮನಸ್ಸನ್ನು ದೇವರ ಕಡೆಗೆ ತಿರುಗಿಸಿಕೊಂಡು ಅವಳ ಕೃತ್ಯಗಳನ್ನು ಬಿಟ್ಟು ಬಿಡದೆ ಹೋದರೆ ಮಹಾ ಸಂಕಟದಲ್ಲಿ ಬೀಳುವಂತೆ ಮಾಡುವೆನು. ಅವಳ ಮಕ್ಕಳನ್ನು ಕೊಂದೇ ಕೊಲ್ಲುವೆನು; ಆಗ ನಾನು ಮನುಷ್ಯರ ಅಂತರಿಂದ್ರಿಯವನ್ನೂ ಹೃದಯವನ್ನೂ ಪರೀಕ್ಷಿಸುವವನಾಗಿದ್ದೇನೆಂದು ಎಲ್ಲಾ ಸಭೆಗಳಿಗೆ ಗೊತ್ತಾಗುವುದು, ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕಹಾಗೆ ಪ್ರತಿಫಲ ಕೊಡುವೆನು."

25. ಏನು? ಈ ಹೆಂಗಸಿಗೆ ಮಕ್ಕಳಿದ್ದಾರೋ? ಮತ್ತು ಅವಳು ಒಬ್ಬ ವೇಶ್ಯೆಯಾಗಿದ್ದಾಳೆ? ಅದು ಹಾಗಿದ್ದರೆ, ಅವಳ ಸೂಳೆಗಾರಿಕೆಯಿಂದ ಅವಳಿಗೆ